ಕರ್ನಾಟಕ ಸರ್ಕಾರ

# ನಲಿ–ಕಲಿ

## 3

## ಮೂರನೆಯ ತರಗತಿ

## ಕನ್ನಡ – ಅಭ್ಯಾಸ ಪುಸ್ತಕ

(ಪರಿಷ್ಕೃತ)

ವಿದ್ಯಾರ್ಥಿ/ ನಿಯ ಹೆಸರು..................................................

ಮಕ್ಕಳ ಶಿಕ್ಷಣ ಹಕ್ಕು

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

ಸರ್ವ ಶಿಕ್ಷಣ ಅಭಿಯಾನ

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)

ಹೊಸಕೆರೆಹಳ್ಳಿ, ಬನಶಂಕರಿ 3ನೆಯ ಹಂತ, ಬೆಂಗಳೂರು –560085.

©KTBS Not to be republished

# ಅಭ್ಯಾಸ ಪುಸ್ತಕ ಪರಿಷ್ಕರಣಾ ತಂಡ

## ಪರಿಕಲ್ಪನೆ ಮತ್ತು ಆಯೋಜನೆ

**ಡಾ|| ಪಿ.ಸಿ. ಜಾಫರ್,** ಭಾ.ಆ.ಸೇ
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

ಡಾ. **ಎಂ.ಟಿ. ರೇಜು,** ಭಾ.ಆ.ಸೇ
ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ ಮತ್ತು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು

## ಸಲಹೆ ಮತ್ತು ಮಾರ್ಗದರ್ಶನ

**ಎಂ. ಎನ್. ಬೇಗ್**
ಅಧ್ಯಕ್ಷರು, ನಲಿ–ಕಲಿ ಕಲಿಕಾ ಸಾಮಗ್ರಿಗಳ ಪರಿಷ್ಕರಣಾ ಸಮಿತಿ
ಹಾಗೂ ನಿವೃತ್ತ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

©KTBS Not to be republished

## ಸಂಚಾಲಕರು

**ಗುಣವತಿ. ಎಸ್**
ಕಿರಿಯ ಕಾರ್ಯಕ್ರಮಾಧಿಕಾರಿ
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು

## ರಚನೆಯಲ್ಲಿ ಭಾಗವಹಿಸಿದ ಸಂಪನ್ಮೂಲ ತಂಡ

**ಕೆ.ಬಿ.ಕೆಂಡಗಣ್ಣಸ್ವಾಮಿ,** ಸ.ಪ್ರಾ. ಶಾಲೆ, ಮೆಣಸಿಕ್ಯಾತನಹಳ್ಳಿ, ನರಸೀಪುರ ತಾಲ್ಲೂಕು.
**ಲಿಲ್ಲೀ ಜೋಸೆಫ್,** ಸ.ಪ್ರಾ.ಶಾಲೆ, ಗೌಸೀಯ ನಗರ, ಉತ್ತರ ವಲಯ ಮೈಸೂರು.
**ಪದ್ಮಿನಿ ಪ್ರಸಾದ್,** ಸ.ಹಿ.ಪ್ರಾ.ಶಾಲೆ, ಭಕ್ತರಹಳ್ಳಿ, ಮೈಸೂರು ತಾಲ್ಲೂಕು.
**ವೀಣಾ ಪಾಟೀಲ್,** ಸ.ಹಿ.ಪ್ರಾ.ಶಾಲೆ, ಎತ್ತಿನಗುಡ್ಡ, ಧಾರವಾಡ.
**ಕುಮಾರ್,** ಸ.ಹಿ.ಪ್ರಾ.ಶಾಲೆ, ಚನ್ನೀಪುರದ ಮೋಳೆ, ಚಾಮರಾಜನಗರ.

## ಕಾರ್ಯಕ್ರಮ ಸಂಯೋಜಕರು

**ಮಂಗಳ ಜಿ.**
ಕಾರ್ಯಕ್ರಮ ಅಧಿಕಾರಿ
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು

# ಓದುವ ಮೊದಲು.....

ಆತ್ಮೀಯ ಶಿಕ್ಷಕರೇ,

ರಾಜ್ಯದ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ 1 ರಿಂದ 3ನೇ ತರಗತಿಗೆ ನಲಿ–ಕಲಿ ಬೋಧನಾ ಪದ್ಧತಿಯನ್ನು ಅಳವಡಿಸಿ ಅನುಷ್ಠಾನಿಸಲಾಗಿದೆ. ಬಹುವರ್ಗ ಮತ್ತು ಬಹುಹಂತದ ತರಗತಿ ಪ್ರಕ್ರಿಯೆಯ ಸವಾಲುಗಳಿಗೆ ಪರಿಹಾರೋಪಾಯವಾಗಿ ಕಂಡು ಬರುವ ಈ ಪದ್ಧತಿಯಲ್ಲಿನ ಸ್ವ–ಕಲಿಕೆ, ಸ್ವ–ವೇಗದ ಕಲಿಕೆ, ಸಂತಸದಾಯಕ ಕಲಿಕೆಯ ತತ್ತ್ವಗಳು ರಾಷ್ಟ್ರ ಮಟ್ಟದಲ್ಲಿ ಹೆಸರಾಗಿದ್ದು ಮಾತ್ರವಲ್ಲದೇ ರಾಜ್ಯಕ್ಕೂ ಹೆಸರನ್ನು ತಂದುಕೊಟ್ಟಿವೆ. ಈ ವಿನೂತನ ಪದ್ಧತಿಯ ಬಗ್ಗೆ ಹಲವು ಸಂಶೋಧನಾ ವರದಿಗಳ ಫಲಿತವು ಸಹ ಧನಾತ್ಮಕವಾಗಿ ದೊರೆತಿರುವುದನ್ನು ನಾವು ಸ್ಮರಿಸಬೇಕು.

2016–17ನೇ ಸಾಲಿನಲ್ಲಿ ನಲಿ–ಕಲಿ ಕಲಿಕಾ ಸಾಮಗ್ರಿಗಳನ್ನು ಸಮಗ್ರವಾಗಿ ಪರಿಷ್ಕರಿಸುವ ಕಾರ್ಯವನ್ನು **'ಸರ್ವ ಶಿಕ್ಷಣ ಅಭಿಯಾನ'**ದ ನೇತೃತ್ವದಲ್ಲಿ ಆಯೋಜಿಸಲಾಗಿದ್ದು, ಇದಕ್ಕಾಗಿ ರಾಜ್ಯ ಮಟ್ಟದಲ್ಲಿ ಪರಿಷ್ಕರಣಾ ಸಮಿತಿಯೊಂದನ್ನು ರಚಿಸಲಾಗಿದೆ. ಪಠ್ಯಕ್ರಮ, ಪಠ್ಯವಸ್ತು ಹಾಗೂ ಪ್ರಸ್ತುತ ಶೈಕ್ಷಣಿಕ ಬದಲಾವಣೆಯನ್ನು ಗಮನಿಸಿ ನಲಿ–ಕಲಿ ಕಲಿಕಾ ಸಾಮಗ್ರಿಗಳ ಸಮಗ್ರ ಪರಿಷ್ಕರಣೆಯ ಅಗತ್ಯತೆಯನ್ನು ಗುರುತಿಸಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸುವ ಮತ್ತು ಕ್ಷೇತ್ರ ಹಂತದಲ್ಲಿ ನಿರಂತರವಾಗಿ ತೊಡಗಿಕೊಳ್ಳುವ ಎಲ್ಲರಿಂದಲೂ ಹಿಮ್ಮಾಹಿತಿಯನ್ನು ಸಂಗ್ರಹಿಸಿ, ಅವುಗಳನ್ನು ವಿಶ್ಲೇಷಿಸಿ, ತರಗತಿವಾರು, ವಿಷಯವಾರು ಕಲಿಕಾ ಸಾಮಗ್ರಿಗಳನ್ನು ಸಮಗ್ರವಾಗಿ ಪರಿಷ್ಕೃತಗೊಳಿಸಲಾಗಿದೆ.

ಮಕ್ಕಳ ಕಲಿಕೆಯ ಅಭ್ಯಾಸವನ್ನು ಪುನರ್ಬಲನಗೊಳಿಸಲು ಕಪ್ಪುಹಲಗೆಯ ಬರವಣಿಗೆಗೆ ಪ್ರತಿ ತರಗತಿಗಳಲ್ಲೂ ಅವಕಾಶ ಕಲ್ಪಿಸಬೇಕು. ಹಾಗೆಯೇ ಅವುಗಳನ್ನು ವಿದ್ಯಾರ್ಥಿವಾರು ವರ್ಗೀಕರಿಸಬೇಕು. ಕಾರಣ ಬರವಣಿಗೆ ಸಾಮರ್ಥ್ಯದ ಬೆಳವಣಿಗೆಗೆ ಇದು ಪ್ರಮುಖ ಸಾಧನವಾಗಿದೆ. ಗುಂಪು ತಟ್ಟೆಗಳಲ್ಲಿ ಕಲಿಕೆಯು ಚಲನೆ ಹೊಂದುವ ರೀತಿಯಲ್ಲಿ ತರಗತಿಯನ್ನು ನಿರ್ವಹಿಸಬೇಕು. ಪ್ರತೀ ವಿದ್ಯಾರ್ಥಿಗೂ ಕಲಿಕಾ ಕಾರ್ಡ್‌ಗಳು ಸುಲಭವಾಗಿ ಎಟಕುವಂತೆ ಶಿಶುಸ್ನೇಹಿ ಪರಿಸರದಲ್ಲಿ ವ್ಯವಸ್ಥಿತವಾಗಿ ಜೋಡಿಸಿಡಬೇಕು ಮತ್ತು ಸ್ವತಂತ್ರವಾಗಿ ಅವುಗಳನ್ನು ಬಳಸುವ ಕೌಶಲವನ್ನು ಮಕ್ಕಳಲ್ಲಿ ಬೆಳೆಸಬೇಕು. ಇದೇ ರೀತಿಯಲ್ಲಿ ಪ್ರತಿ ವಿಷಯವಾರು ತರಗತಿ ಪ್ರಕ್ರಿಯೆ ನಿರ್ವಹಣೆಗೆ ಶಿಕ್ಷಕರು ಗಮನಹರಿಸಬೇಕು.

ನಲಿ–ಕಲಿ ತರಗತಿ ಪ್ರಕ್ರಿಯೆಯಲ್ಲಿ ಅಭ್ಯಾಸ ಪುಸ್ತಕಗಳು ಗಣನೀಯ ಪಾತ್ರವನ್ನು ನಿರ್ವಹಿಸುತ್ತವೆ. ಪ್ರತಿ ವಿದ್ಯಾರ್ಥಿಯ ಬರವಣಿಗೆ ಸಾಮರ್ಥ್ಯಾಭಿವೃದ್ಧಿಗೆ ಅವಕಾಶ ಕಲ್ಪಿಸುವ ದಿಸೆಯಲ್ಲಿ ಹೆಚ್ಚು ಅಭ್ಯಾಸ ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ಸೇರ್ಪಡೆ ಮಾಡಲಾಗಿದೆ. ಇವುಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿ, ತಪ್ಪುಗಳನ್ನು ತಿದ್ದಿ. ಮೌಲ್ಯಮಾಪನ ಕೈಗೊಳ್ಳುವುದು ಶಿಕ್ಷಕರ ಜವಾಬ್ದಾರಿಯಾಗಿದೆ. ಮಕ್ಕಳ ಪ್ರಗತಿಯನ್ನು ಪೋಷಕರಿಗೆ ನಿಯಮಿತವಾಗಿ ವಿವರಿಸುವಲ್ಲಿ ಅಭ್ಯಾಸ ಪುಸ್ತಕಗಳು ಪ್ರಮುಖ ದಾಖಲೆ ಎನಿಸಿವೆ ಎಂಬುದನ್ನು ಮರೆಯಬಾರದು.

ಆರ್.ಟಿ.ಇ–2009 ಪ್ರತಿ ಮಗುವಿನ ಕಲಿಕಾ ಸಮಯ ಸದ್ಬಳಕೆಯಾಗುವಂತೆ ನೋಡಿಕೊಳ್ಳಬೇಕು ಎಂದು ಒತ್ತಿ ಹೇಳುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹಾಗೂ ಸಿಸಿಇ ಆಶಯವನ್ನು ಪ್ರಾಥಮಿಕ ಶಾಲೆಗಳಲ್ಲಿ ಈಡೇರಿಸುವುದು ನಮ್ಮ–ನಿಮ್ಮೆಲ್ಲರ ಜವಾಬ್ದಾರಿಯಾಗಿದ್ದು, ನಲಿ–ಕಲಿ ಬೋಧನಾ ಪದ್ಧತಿಯನ್ನು ಅನುಪಾಲನೆಗೊಳಿಸಿ, ಹೆಚ್ಚು ಬಲವರ್ಧನೆಗೊಳಿಸಲು ಎಲ್ಲರೂ ಜೊತೆಯಾಗಿ ಶ್ರಮಿಸೋಣ. ಹಾಗೆಯೇ ಸಮಗ್ರ ಪರಿಷ್ಕರಣಾ ಕಾರ್ಯದಲ್ಲಿ ಭಾಗಿಯಾದ ಎಲ್ಲರಿಗೂ ನನ್ನ ಅಭಿನಂದನೆಗಳು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ ಮತ್ತು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

©KTBS Not to be republished

# ಪೂರ್ವಭಾವಿ ಚಟುವಟಿಕೆ 3

©KTBS Not to be republished


## ಅ) ಈ ಕೆಳಗಿನ ಚಿತ್ರಗಳನ್ನು ಹೆಸರಿಸು:-

1)  ________________

2)  ________________

3)  ________________

4)  ________________

5)  ________________

## ಆ) ಆವರಣದಿಂದ ಸೂಕ್ತ ಅಕ್ಷರ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆ:-

1) ________________ ಗಾರಿಕೆ (ಮೈ, ದೈ, ಕೈ)

2) ಗು________________ ಟ (ಟ್ಟ, ಮ್ಮ, ನ್ನ)

3) ಉ ________________ ಲೆ (ಯ್ಯಾ, ವ್ಯಾ, ಪ್ಪ)

4) ಪೆ ________________ (ತ್ತು, ನ್ನು, ರ್ರ)

5) ಉ ________________ ಟನೆ (ದ್ದಾ, ದ್ಘಾ, ದ್ಧಾ)

ದಿನಾಂಕ : ..........................................

ಶಿಕ್ಷಕರ ಸಹಿ

# ಪೂರ್ವಭಾವಿ ಚಟುವಟಿಕೆ

**3**

ಇ) ಈ ಚೌಕದಲ್ಲಿರುವ ಅಕ್ಷರಗಳನ್ನು ಬಳಸಿ 2/3 ಅಕ್ಷರಗಳ ಪದಗಳನ್ನು ಬರೆ.

| | | | | | |
|---|---|---|---|---|---|
| ಮೆ | ಟ್ಟಿ | ಲು | ಜ | ಅ | ಕ್ಕ |
| ಚ್ಚು | ಪ | ಅ | ಕೃ | ಜು | ಶ |
| ರಾ | ರೈ | ಕ್ಷಿ | ಪ | ಣೆ | ಟ್ಟು |
| ಕ್ಕ | ಲು | ರ | ಣ | ವಿ | ಗಿ |
| ತ | ಕ್ಷೆ | ಚೈ | ಬು | ಪ | ಶ್ವ |
| ರ | ಕ್ಕ | ಸ | ನು | ದ್ಧ | ತ್ರ |
| ಜ | ಟ್ಟಿ | ಡಿ | ವ | ರ್ಣ | ಛ |

1) ______
2) ______
3) ______
4) ______
5) ______
6) ______
7) ______
8) ______
9) ______
10) ______

ಈ) ವೃತ್ತದಲ್ಲಿ ನೀಡಿರುವ ಅಕ್ಷರಕ್ಕೆ ಸೂಕ್ತ ಅಕ್ಷರಗಳನ್ನು ಸೇರಿಸಿ ಪದಗಳನ್ನು ರಚಿಸಿ ಬರೆ.

ಮಾದರಿ:–

ಅ (↑), ಚೊ (←) ಕ್ಕ (→) ಪ, ಲೆ (↓)

ಅಕ್ಕ
ಚೊಕ್ಕ
ಪಕ್ಕ
ಲೆಕ್ಕ

1) ಟ್ಟ
1) ______
2) ______
3) ______
4) ______

2) ಣ್ಣ
1) ______
2) ______
3) ______
4) ______

3) ಗ್ಗ
1) ______
2) ______
3) ______
4) ______

ದಿನಾಂಕ : ........................................

ಶಿಕ್ಷಕರ ಸಹಿ

©KTBS Not to be republished

# ಪೂರ್ವಭಾವಿ ಚಟುವಟಿಕೆ

**4**

## 1) ಈ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯ ರಚಿಸು.

1. ಹಾಲು ಕಪ್ಪೇ ಕಪ್ಪಾದರೆ ಆಕಳು

______________________________

2. ಬೆಟ್ಟ ದೂರದ ನುಣ್ಣಗೆ ಕಣ್ಣಿಗೆ

______________________________

3. ಹೊಟ್ಟೆಗೆ ಹೂ ಮಲ್ಲಿಗೆ ಜುಟ್ಟಿಗೆ ಹಿಟ್ಟಿಲ್ಲ

______________________________

4. ಮಿಠಾಯಿ ಎಳೆದವನಿಗೆ ಗಡ್ಡ

______________________________

5. ಕೆಸರಾದರೆ ಬಾಯಿ ಕೈ ಮೊಸರು

______________________________

©KTBS Not to be republished

## 2) ಈ ಪ್ರಶ್ನೆಗಳಿಗೆ ಉತ್ತರಿಸು :–

1. ನೀನು ನೋಡಿರುವ ಊರುಗಳ ಹೆಸರು ಬರೆ:–

1) __________ 2) __________ 3) __________ 4) __________

2. ನಿನಗೆ ಇಷ್ಟವಾದ ಪ್ರಾಣಿಗಳ ಹೆಸರು ಬರೆ:–

1) __________ 2) __________ 3) __________ 4) __________

3. ನಿನಗೆ ಇಷ್ಟವಾದ ಸಿಹಿತಿಂಡಿಗಳ ಹೆಸರು ಬರೆ:–

1) __________ 2) __________ 3) __________ 4) __________

ದಿನಾಂಕ : ..........................................

ಶಿಕ್ಷಕರ ಸಹಿ

3) ಚಿತ್ರ ನೋಡಿ ವಾಕ್ಯ ರಚಿಸಿ ಬರೆ.

(ಇವರಿಗೆ ನೀನು ಹೇಗೆ ಸಹಾಯ ಮಾಡುವೆ ತಿಳಿಸು)

1.



2.



ದಿನಾಂಕ : ........................................ ಶಿಕ್ಷಕರ ಸಹಿ

©KTBS Not to be republished

# 1. ಬಾವಿಯಲ್ಲಿ ಚಂದ್ರ





ತಿಂಗಳ ಬೆಳಕಿನ ಇರುಳಿನಲಂದು
ಅಮ್ಮನು ಕೆಲಸದೊಳಿರುತಿರೆ ಕಂಡು
ಗೋಪಿಯು ಪುಟ್ಟುವು ಹೊರಗಡೆ ಬಂದು
ಬಾವಿಗೆ ಇಣುಕಿದರು ।

ಬಾವಿಲಿ ಚಂದ್ರನ ಬಿಂಬವ ಕಂಡು
ಚಂದ್ರನು ಬಾವಿಗೆ ಬಿದ್ದನು ಎಂದು
ಅಯ್ಯೋ! ಪಾಪವೇ ಎನ್ನುತಲೊಂದು
ಕೊಕ್ಕೆಯ ಹುಡುಕಿದರು ।

ಚಂದ್ರನ ಮೇಲಕೆ ಎತ್ತಲಿಕೆಂದು
ಬಾವಿಯ ಹಗ್ಗಕೆ ಕೊಕ್ಕೆಯ ಬಿಗಿದು
ದೂರದಿ ಗೋಪಿಯ ನಿಲ್ಲಿಸಿ ಪುಟ್ಟು
ಹಗ್ಗವನಿಳಿಸಿದನು ।

ಹಗ್ಗದ ಕೊಕ್ಕೆಯು ಕಲ್ಲಿಗೆ ಸಿಕ್ಕಿ
ಪುಟ್ಟುವು ಚಂದ್ರನು ಸಿಕ್ಕೇ ಸಿಕ್ಕ
ಎನ್ನುತ ತುಂಬಾ ಬಲದಿಂದೆಳೆಯೇ
ಹಗ್ಗವು ತುಂಡಾಯ್ತು ।

ಎಳೆತದ ರಭಸಕೆ ಪುಟ್ಟುವು ಬಿದ್ದ
ಮೆಲ್ಲನೆ ಮನೆ ಕಡೆ ನೋಡುತಲೆದ್ದ
ತಂಗಿಗೆ ಆಗಸ ತೋರುತಲೆಂದ
ಗೋಪಿ ನೋಡಲ್ಲಿ ।

ಚಂದ್ರನ ಮೇಲಕೆ ಏರಿಸಿ ಬಿಟ್ಟೆ
ನಮ್ಮಯ ದೇವರ ಬದುಕಿಸಿ ಕೊಟ್ಟೆ
ಅಮ್ಮಗೆ ಗೊತ್ತಾದರೆ ನಾ ಕೆಟ್ಟೆ
ಎಂದೋಡಿದ ಪುಟ್ಟು ।

– ಬಿ. ಎಂ. ಶರ್ಮಾ

**ಹೊಸ ಪದಗಳ ಅರ್ಥ :**

ತಿಂಗಳು – ಚಂದ್ರ, ಚಂದಿರ, ಚಂದ್ರಮ, ಶಶಿ
ಇರುಳು – ರಾತ್ರಿ
ಇಣುಕು – ಹಣಿಕಿ ನೋಡು, ಬಗ್ಗಿ ನೋಡು
ಬಿಂಬ – ಪ್ರತಿರೂಪ, ಪಡಿನೆರಳು
ತುಂಡಾಗು –ಕಿತ್ತು ಹೋಗು, ಹರಿ
ರಭಸ – ವೇಗ
ಆಗಸ – ಆಕಾಶ, ಮುಗಿಲು, ಬಾನು

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ

ಅ) "ಅ" ಪಟ್ಟಿಯಲ್ಲಿರುವ ಪದಗಳಿಗೆ "ಬ" ಪಟ್ಟಿಯಲ್ಲಿರುವ ಅರ್ಥಗಳನ್ನು ಹೊಂದಿಸಿ ಗೆರೆಯ ಮೇಲೆ ಬರೆ.

| "ಅ" ಪಟ್ಟಿ | "ಬ" ಪಟ್ಟಿ | |
|---|---|---|
| 1. ಇಣುಕು | ವೇಗ | ________ |
| 2. ತಿಂಗಳು | ಆಗಸ | ________ |
| 3. ಬಿಂಬ | ಪ್ರತಿರೂಪ | ________ |
| 4. ರಭಸ | ಬಗ್ಗಿನೋಡು | ________ |
| | ಚಂದಿರ | |

ಆ) ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸು.

ಗೋಪಿಯು ಪುಟ್ಟು ಹೊರಗಡೆ ಬಂದು

________________________

ದೂರದಿ ಗೋಪಿಯ ನಿಲ್ಲಿಸಿ ಪುಟ್ಟು.

________________________

ಎಳೆತದ ರಭಸಕೆ ಪುಟ್ಟುವು ಬಿದ್ದ.

________________________

ಅಮ್ಮಗೆ ಗೊತ್ತಾದರೆ ನಾ ಕೆಟ್ಟೆ.

________________________

ದಿನಾಂಕ : ..........................................   ಶಿಕ್ಷಕರ ಸಹಿ

©KTBS Not to be republished

1 3

# ಪ್ರಶ್ನೋತ್ತರ

9

ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.

ಮಾದರಿ:

ಇಣುಕು : ಬಾವಿಗೆ ಇಣುಕಿದರು.

ಬಿಂಬ :

ಆಗಸ :

ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಗೋಪಿ, ಪುಟ್ಟು ಯಾವಾಗ ಹೊರಗಡೆ ಬಂದರು?

2. ಗೋಪಿ, ಪುಟ್ಟು ಚಂದ್ರನ ಬಿಂಬವನ್ನು ಎಲ್ಲಿ ನೋಡಿದರು?

3. ಕೊಕ್ಕೆಯನ್ನು ಯಾರು ತಂದರು?

4. ಪುಟ್ಟು ಏಕೆ ಬಿದ್ದನು?

5. ಚಂದ್ರನನ್ನು ಮೇಲಕ್ಕೇರಿಸಿದವರು ಯಾರು?

6. ಗೋಪಿ ಮತ್ತು ಪುಟ್ಟು ಯಾರನ್ನು ಬದುಕಿಸಿದರು?

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ

ಸೂಚನೆ: ನೀಡಲಾದ ಸುಳಿವು ಓದಿಕೊಂಡು ಪದಬಂಧವನ್ನು ಪೂರ್ಣಗೊಳಿಸು.

| | | | |
|---|---|---|---|
| 1 | | | 2 |
| | | 3 | |
| | 4 | | |
| 5 | | | |

©KTBS Not to be republished

**ಮೇಲಿನಿಂದ ಕೆಳಕ್ಕೆ**

1) ಪುಟ್ಟು ಬಾವಿಗೆ ಇದನ್ನು ಇಳಿಸಿದ

2) ಗೋಪಿ ಪುಟ್ಟು ಹೊರಗಡೆ ಬಂದ ಸಮಯ

3) ಚಂದ್ರ ಇಲ್ಲಿರುತ್ತಾನೆ

**ಎಡದಿಂದ ಬಲಕ್ಕೆ**

1) ಆಕಾಶದಲ್ಲಿ ಹಾರುವ ಜೀವಿ

3) ಐದರ ನಂತರದ ಸಂಖ್ಯೆ

4) ಚಂದ್ರನಿಗೆ ಇರುವ ಮತ್ತೊಂದು ಹೆಸರು

5) ಅಮ್ಮ ಮಾಡುತ್ತಿದ್ದುದು

ದಿನಾಂಕ : ..........................................

ಶಿಕ್ಷಕರ ಸಹಿ

1 4

# ಕಥೆ ರಚನೆ
## ಇರುವೆ ಮತ್ತು ಪಾರಿವಾಳ

12

ಕೆಳಗಿನ ಕಥೆಯನ್ನು ಓದಿಕೊಂಡು ಚಿತ್ರ ಇರುವ ಜಾಗದಲ್ಲಿ ಪದ ಬಳಸಿ ಕಥೆಯನ್ನು ನೋಟ್‌ಪುಸ್ತಕದಲ್ಲಿ ಬರೆ.

ಒಂದು ಅಡವಿಯಲ್ಲಿ ಒಂದು  ಹರಿಯುತ್ತಿತ್ತು. ಆ ನದಿಯ ದಡದಲ್ಲಿ ಒಂದು  ವಿತ್ತು. ಆ ಮರದ ಮೇಲೆ ಒಂದು  ವು ಕುಳಿತಿತ್ತು. ಆ ಪಾರಿವಾಳವು ನದಿಯಲ್ಲಿ ತೇಲುತ್ತಾ ಮುಳುಗುತ್ತಾ ಇದ್ದ  ಯನ್ನು ನೋಡಿತು. ಆ ಇರುವೆಯನ್ನು ಬದುಕಿಸಲೆಂದು  ವು ಒಂದು  ಯನ್ನು ನದಿಗೆ ಎಸೆಯಿತು.  ಯು  ಯ ಮೇಲೆ ಕುಳಿತು ದಡ ಸೇರಿತು.  ಯು  ದ ಉಪಕಾರವನ್ನು ಸ್ಮರಿಸಿತು.

ಒಮ್ಮೆ ಒಬ್ಬ  ನು  ವನ್ನು ಕೊಲ್ಲಲು  ದಿಂದ ಗುರಿ ಇಟ್ಟನು. ಇದನ್ನು ನೋಡಿದ  ಯು ಬೇಟೆಗಾರನ ಕಾಲನ್ನು ಕಚ್ಚಿತು.  ನು ಇಟ್ಟ ಬಾಣದ ಗುರಿ ತಪ್ಪಿತು.  ವು ಬದುಕಿತು. ಈ ರೀತಿ  ಯು  ಕ್ಕೆ ಪ್ರತ್ಯುಪಕಾರ ಮಾಡಿತು.

©KTBS Not to be republished

ದಿನಾಂಕ : ..........................................

ಶಿಕ್ಷಕರ ಸಹಿ

# ಭಾಷಾ ಆಟ
# ನಾನು ಯಾರು ಗೊತ್ತೆ ?



ಸೂಚನೆ: ಕೆಳಗೆ ಕೊಟ್ಟಿರುವ ಒಗಟನ್ನು ಓದಿಕೊಂಡು ಅವುಗಳನ್ನು ಬಿಡಿಸಿ, ಉತ್ತರವನ್ನು ಖಾಲಿಜಾಗದಲ್ಲಿ ಬರೆ.

1. ಹಸಿರು ಪುಕ್ಕ ; ಕೆಂಪು ಕೊಕ್ಕು
   ನೆಟ್ಟ ಕಣ್ಣು ; ಊಟ ಹಣ್ಣು
   ನಾನು ಯಾರು ಗೊತ್ತೆ ?

2. ಸೋಗೆ ಗರಿ ; ಸೊಗಸು ನಾಟ್ಯ
   ರಂಗು ರಂಗು ; ನೂರು ಕಣ್ಣು
   ನಾನು ಯಾರು ಗೊತ್ತೆ ?

3. ದೊಡ್ಡ ದೇಹ; ಮೋಟು ಬಾಲ
   ಕಣ್ಣು ಸಣ್ಣ; ಸಂಘಜೀವಿ
   ನಾನು ಯಾರು ಗೊತ್ತೆ ?

3. ನೀರಿನಲ್ಲಿ ನನ್ನವಾಸ
   ನನ್ನಬೆನ್ನು ಬಹಳ ಗಟ್ಟಿ
   ನಡಿಗೆ ಮಾತ್ರ ನಿಧಾನ
   ನಾನು ಯಾರು ಗೊತ್ತೆ ?

©KTBS
Not to be republished

ದಿನಾಂಕ : ..........................................

ಶಿಕ್ಷಕರ ಸಹಿ

# 2. ಲಗೋರಿ ಆಟ





(ಶಾಲೆಯ ಆಟದ ಮೈದಾನದಲ್ಲಿ ಚರ್ಚೆಯೋ ಚರ್ಚೆ. ಚರ್ಚೆ ನಿಲ್ಲಲು ಶಿಕ್ಷಕರ ಆಗಮನವೇ ಆಗಬೇಕಾಯಿತು)

ಮಕ್ಕಳು : ನಮಸ್ತೆ ಸಾರ್.

ಶಿಕ್ಷಕರು : ನಮಸ್ತೆ ಏನಿದು ? ಇಷ್ಟೊಂದು ಚರ್ಚೆ ನಡೆಯುತ್ತಿದೆಯಲ್ಲಾ !

ಮಕ್ಕಳು : ನಿನ್ನೆ ಒಂದು ಹೊಸ ಆಟ ಆಡಿಸುತ್ತೇನೆಂದು ಹೇಳಿದ್ದೀರಲ್ಲಾ ಸರ್. ಅದು ಯಾವ ಆಟ ಇರಬಹುದು ? ಎಂದು ಚರ್ಚಿಸುತ್ತಾ ಇದ್ದೇವೆ.

ಶಿಕ್ಷಕರು : ಯಾವ ಆಟ ಇರಬಹುದು ? ಹೇಳಿ ನೋಡೋಣ.

ಮಕ್ಕಳು : (ಒಬ್ಬೊಬ್ಬರಾಗಿ) ಕಬಡ್ಡಿ, ಚಿನ್ನಿದಾಂಡು, ಖೋ ಖೋ, ಜೂಟಾಟ, ಕಳ್ಳ ಪೊಲೀಸ್, ಮರ ಕೋತಿ ಆಟ.

ಶಿಕ್ಷಕರು : ಇದಾವುದೂ ಅಲ್ಲ ಮಕ್ಕಳೆ, ನಾನು ಆಡಿಸಬೇಕೆಂದಿರುವ ಆಟ ಲಗೋರಿ ಆಟ. ಇದೊಂದು ಹೊರಾಂಗಣ ಆಟವಾಗಿದೆ.

ಮಕ್ಕಳು : (ಒಕ್ಕೊರಲಿನಿಂದ) ಈಗಲೇ ಆಡಿಸಿ ಸಾರ್.

ಶಿಕ್ಷಕರು : ನಿಧಾನಿಸಿ, ಆಟ ಆಡುವ ಮೊದಲು ಆಟದ ನಿಯಮಗಳನ್ನು ತಿಳಿದುಕೊಳ್ಳಬೇಕು.

ಮಕ್ಕಳು : ಹಾಗಾದರೆ ಲಗೋರಿ ಆಟದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ತಿಳಿಸಿ, ಸಾರ್.

ಶಿಕ್ಷಕರು : ಮುಖ್ಯವಾಗಿ ಈ ಆಟ ಆಡಲು ಎರಡು ಗುಂಪುಗಳಿರಬೇಕು.

ರಾಜು : ನಮ್ಮನ್ನೇ ಎರಡು ಗುಂಪುಗಳನ್ನಾಗಿ ಮಾಡಿ ಸಾರ್.

ಶಿಕ್ಷಕರು : ಪೂರ್ತಿ ನಿಯಮಗಳನ್ನು ಹೇಳುವವರೆಗಾದರೂ ತಾಳ್ಮೆಯಿಂದ ಇರಬಾರದೇ ? ರಾಜು

ರಾಣಿ : ಈ ರಾಜು ಬಲು ಆತುರಗಾರ.

ಶಿಕ್ಷಕರು : ಸರಿ ಮುಂದೆ ಕೇಳಿ, ನೆಲದ ಮೇಲೆ ವೃತ್ತವನ್ನು ಹಾಕಿ, ವೃತ್ತದ ಮಧ್ಯದಲ್ಲಿ ಒಂದರ ಮೇಲೊಂದರಂತೆ 8–10 ಚಪ್ಪಟೆಯಾದ ಕಲ್ಲಿನ (ಹೆಂಚು ಅಥವಾ ಹಲಗೆ) ಚೂರುಗಳನ್ನು ಜೋಡಿಸಿಕೊಳ್ಳಬೇಕು.

ಮೇರಿ : ಆಮೇಲೆ ಸಾರ್ ?

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# 2. ಲಗೋರಿ ಆಟ



ಶಿಕ್ಷಕರು : ಜೋಡಿಸಿದ ಕಲ್ಲಿನ ಎದುರು-ಬದುರಿನಲ್ಲಿ ಸಮಾನ ದೂರದಲ್ಲಿರುವಂತೆ ಎರಡು ಗೆರೆ ಎಳೆಯಬೇಕು.

ಹೈದರ್ : ಗೆರೆ ಎಳೆದ ನಂತರ ?

ಶಿಕ್ಷಕರು : ಒಂದು ಗುಂಪಿನ ಪ್ರತಿ ಸದಸ್ಯರು ಚೆಂಡಿನಿಂದ ಹೊಡೆದು ವೃತ್ತದಲ್ಲಿ ಜೋಡಿಸಿರುವ ಕಲ್ಲುಗಳನ್ನು ಉರುಳಿಸಬೇಕು. ಒಬ್ಬರಿಗೆ ಮೂರು ಅವಕಾಶಗಳಿರುತ್ತವೆ.

ಹೈದರ್ : ಕಲ್ಲು ಉರುಳಿಸಿದ ಮೇಲೆ ?

ಶಿಕ್ಷಕರು : ಕಲ್ಲು ಉರುಳಿದ ತಕ್ಷಣ ಚೆಂಡು ಎಸೆದ ತಂಡದ ಸದಸ್ಯರು ಓಡಬೇಕು. ಇನ್ನೊಂದು ತಂಡದವರು, ಕಲ್ಲು ಉರುಳಿಸಿದ ತಂಡದ ಸದಸ್ಯರಿಗೆ ಚೆಂಡಿನಿಂದ ಹೊಡೆಯಬೇಕು. ಕಲ್ಲು ಉರುಳಿಸಿದ ತಂಡದವರು ಚೆಂಡು ದೂರದಲ್ಲಿದ್ದಾಗ ಕಲ್ಲುಗಳನ್ನು ಒಂದರ ಮೇಲೊಂದರಂತೆ ಬೀಳದ ಹಾಗೆ ಜೋಡಿಸಿ ನಂತರ 'ಲಗೋರಿ' ಎಂದು ಕೂಗಬೇಕು.

ರಾಜು : ಜೋಡಿಸುವಷ್ಟರಲ್ಲಿ ಚೆಂಡು ತಾಗಿದರೆ ?

ಶಿಕ್ಷಕರು : ಆ ತಂಡ ಔಟ್ ಆದಂತೆ. ನಂತರ ಎದುರಿನ ತಂಡ ಆಡಬೇಕು.

ಕೆನಡಿ : ಹಾಗಾದರೆ ಇದರಲ್ಲಿ ಗೆದ್ದ ತಂಡ ಯಾವುದು ?

ಶಿಕ್ಷಕರು : ಯಾರು ಹೆಚ್ಚು ಸಲ ಕಲ್ಲನ್ನು ಉರುಳಿಸಿ, ಚೆಂಡು ತಾಗದಂತೆ ಎಚ್ಚರ ವಹಿಸಿ, ಕಲ್ಲನ್ನು ಜೋಡಿಸುತ್ತಾರೆಯೋ, ಆ ತಂಡ ಆಟದಲ್ಲಿ ಗೆದ್ದಂತೆ.

ಮಕ್ಕಳು : ಹೊಸ ಆಟ ಹೇಳಿ ಕೊಟ್ಟಿದ್ದಕ್ಕೆ ವಂದನೆಗಳು ಸಾರ್.

ಶಿಕ್ಷಕರು : ಈಗ ಎಲ್ಲರೂ ನಿಯಮಗಳನ್ನು ಆಲಿಸಿದಿರಿ. ಆಟ ಆಡೋಣ.

ಮಕ್ಕಳೆಲ್ಲರೂ ಆಟ ಆಡಲು ಓಡಿದರು.

---

**ಹೊಸ ಪದಗಳ ಅರ್ಥ :**

| | | |
|---|---|---|
| ಚರ್ಚೆ | – | ವಾದ, ತರ್ಕ, ವಿಚಾರವಿನಿಮಯ |
| ತಾಳ್ಮೆ | – | ಸಹನೆ |
| ಚಪ್ಪಟೆ | – | ಮಟ್ಟವಾದ, ಸಮತಟ್ಟು |
| ಹೊರಾಂಗಣ ಆಟ | – | ಬಯಲಿನಲ್ಲಿ ಆಡುವ ಆಟ |
| ಆತುರ | – | ಅವಸರ |
| ಉರುಳಿಸು | – | ಬೀಳಿಸು |
| ಎಚ್ಚರವಹಿಸು | – | ನಿಗಾವಹಿಸು |
| ಆಲಿಸು | – | ಮನಸ್ಸಿಟ್ಟು ಕೇಳು |

ದಿನಾಂಕ : ..........................................    ಶಿಕ್ಷಕರ ಸಹಿ

© KTBS Not to be republished

# ಅಭ್ಯಾಸ



**ಸೂಚನೆ 1 : 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿನ ಅರ್ಥಗಳನ್ನು ಸರಿ ಹೊಂದಿಸಿ ಗೆರೆಯ ಮೇಲೆ ಬರೆ.**

'ಅ' ಪಟ್ಟಿ

| | |
|---|---|
| ಚರ್ಚೆ | ತಾಳ್ಮೆ |
| ಚಪ್ಪಟೆ | ಉರುಳಿಸು |
| ಆತುರ | |

'ಬ' ಪಟ್ಟಿ

| | |
|---|---|
| ಸಮತಟ್ಟು | ವಾದ |
| ಸಹನೆ | ಅವಸರ |
| ಬೀಳಿಸು | |

**ಮಾದರಿ : ಚರ್ಚೆ – ವಾದ**

1. ______________________
2. ______________________
3. ______________________
4. ______________________

**ಸೂಚನೆ 2 : ಆವರಣದಲ್ಲಿನ ಸೂಕ್ತ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆ.**

1. ಆಟ ಆಡುವ ಮೊದಲು ಆಟದ ____________ ಗಳನ್ನು ತಿಳಿಯಬೇಕು.
   (ಗುರಿ, ನಿಯಮ, ಪಾಲನೆ)

2. ಲಗೋರಿ ಆಟ ಆಡಲು ____________ ಗುಂಪುಗಳು ಬೇಕು.
   (ನಾಲ್ಕು, ಮೂರು, ಎರಡು)

3. ಚೆಂಡು ____________ ದಲ್ಲಿದ್ದಾಗ ಕಲ್ಲುಗಳನ್ನು ಜೋಡಿಸಬೇಕು.
   (ಹತ್ತಿರ, ದೂರ, ಮಧ್ಯೆ)

4. ಎರಡು ಗೆರೆಗಳನ್ನು ____________ ದೂರದಲ್ಲಿ ಎಳೆಯಬೇಕು.
   (ಸಮಾನ, ತುಂಬ, ಅತಿ)

5. ಕಲ್ಲುಗಳನ್ನು ವೃತ್ತದ ____________ ಜೋಡಿಸಬೇಕು.
   (ಹೊರಗೆ, ಮಧ್ಯದಲ್ಲಿ, ಮೇಲೆ)

ದಿನಾಂಕ : ..........................................

ಶಿಕ್ಷಕರ ಸಹಿ



©KTBS Not to be republished

2 3

# ಪ್ರಶ್ನೋತ್ತರ



**ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.**

ಮಾದರಿ : ಚರ್ಚೆ – ಮಕ್ಕಳು ಮೈದಾನದಲ್ಲಿ ಚರ್ಚೆ ಮಾಡುತ್ತಿದ್ದರು.

1. ಹೊರಾಂಗಣ ಆಟ :

2. ಚಪ್ಪಟೆ :

3. ಎಚ್ಚರಿಸು :

**ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.**

1. ಶಿಕ್ಷಕರು ಮಕ್ಕಳಿಗೆ ಯಾವ ಆಟದ ಬಗ್ಗೆ ತಿಳಿಸಿದರು?
2. ಲಗೋರಿ ಆಟ ಆಡಲು ಎಷ್ಟು ಗುಂಪುಗಳಿರಬೇಕು?
3. ಲಗೋರಿ ಆಟದಲ್ಲಿ ಕಲ್ಲುಗಳನ್ನು ಹೇಗೆ ಜೋಡಿಸಬೇಕು?
4. ಲಗೋರಿ ಆಡುವ ಮುನ್ನ ಏನನ್ನು ತಿಳಿದಿರಬೇಕು?
5. ಲಗೋರಿ ಆಟಕ್ಕೆ ಬಳಸುವ ಸಾಮಗ್ರಿಗಳು ಯಾವುವು?
6. ಲಗೋರಿ ಆಟದಲ್ಲಿ ಗೆರೆಗಳನ್ನು ಹೇಗೆ ಎಳೆಯಬೇಕು?
7. ಕಲ್ಲು ಉರುಳಿಸಿದ ತಂಡದವರು ತಕ್ಷಣ ಏನು ಮಾಡಬೇಕು?

ದಿನಾಂಕ : ............................................ ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ



ಅ) ಗೆರೆಹಾಕಿದ ಚೌಕದಲ್ಲಿರುವ ಪದಗಳಿಗೆ ಸರಿಹೊಂದುವ ವಿರುದ್ಧಾರ್ಥಕ ಪದಗಳನ್ನು ಗೆರೆ ಇಲ್ಲದ ಚೌಕಗಳಿಂದ ಆಯ್ದು ಮಾದರಿಯಂತೆ ಬರೆ.

| | | | |
|---|---|---|---|
| ಕಡಿಮೆ | ದೂರ | ಮೇಲೆ | ಒಳಾಂಗಣ |
| ಆರಂಭ | ನಿರ್ಗಮನ | ಹಳೆಯದು | ಸೋಲು |
| ಹೊರಾಂಗಣ | ಕೆಳಗೆ | ಹತ್ತಿರ | ಆಗಮನ |
| ಗೆಲುವು | ಹೊಸದು | ಹೆಚ್ಚು | ಅಂತ್ಯ |

©KTBS Not to be republished

ಮಾದರಿ : ದೂರ × ಹತ್ತಿರ

1. ______________________
2. ______________________
3. ______________________
4. ______________________
5. ______________________
6. ______________________
7. ______________________


ದಿನಾಂಕ : .......................................... ಶಿಕ್ಷಕರ ಸಹಿ

# ಭಾಷಾಭ್ಯಾಸ



ಆ) ಮರದ ಚಿತ್ರದಲ್ಲಿರುವ ಪದಗಳಿಗೆ ಸೂಕ್ತ ವಿರುದ್ಧಾರ್ಥಕ ಪದಗಳನ್ನು ಎಲೆ ಚಿತ್ರದಲ್ಲಿರುವ ಪದಗಳಿಂದ ಆರಿಸಿಕೊಂಡು ಮಾದರಿಯಂತೆ ಬರೆ.




©KTBS Not to be republished

ಮಾದರಿ : ಪೂರ್ಣ x ಅಪೂರ್ಣ

1. ______________________________
2. ______________________________
3. ______________________________
4. ______________________________
5. ______________________________
6. ______________________________
7. ______________________________
8. ______________________________

ದಿನಾಂಕ : ..........................................

ಶಿಕ್ಷಕರ ಸಹಿ

# ಭಾಷಾಭ್ಯಾಸ



ಸೂಚನೆ : ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬರೆ.

ಮಾದರಿ 1 : ನಕ್ಷತ್ರ – ನಕ್ಷತ್ರಗಳು

1. ಗೋಲಿ – ________________
2. ಗಿಡ – ________________
3. ಮರ – ________________
4. ಕುರ್ಚಿ – ________________
5. ಪುಸ್ತಕ – ________________
6. ಚೀಲ – ________________
7. ಕೊಠಡಿ – ________________
8. ಮನೆ – ________________

ಮಾದರಿ 2 : ಮರಗಳು – ಮರ

1. ಹಾಳೆಗಳು – ________________
2. ಪೆನ್ಸಿಲ್‌ಗಳು – ________________
3. ಹೂಗಳು – ________________
4. ಚಿತ್ರಗಳು – ________________
5. ವಿದ್ಯಾರ್ಥಿಗಳು – ________________
6. ಪಕ್ಷಿಗಳು – ________________
7. ಬಸ್ಸುಗಳು – ________________

ದಿನಾಂಕ : .........................................  ಶಿಕ್ಷಕರ ಸಹಿ

©KTBS Not to be republished

# ಚಿತ್ರ ನೋಡಿ ಉತ್ತರಿಸು



ಸೂಚನೆ : ಈ ಚಿತ್ರವನ್ನು ಗಮನಿಸು. ಹುಡುಗ ಕೆಲಸ ಮಾಡಲು ಸಹಾಯವಾಗುವಂತೆ 5 ಸೂಚನೆಗಳನ್ನು ಬರೆ.



ಮಾದರಿ : ಮರದ ನೆರಳಿನಲ್ಲಿ ನಿಲ್ಲು.

1. ______________________________

2. ______________________________

3. ______________________________

4. ______________________________

5. ______________________________

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

2 4

# ಅರ್ಥ ಮಾಡಿಕೊಂಡು ಬರೆ

27

* ಸೂಚನೆಗಳನ್ನು ಓದಿ ಅರ್ಥ ಮಾಡಿಕೊಂಡು ಕ್ರಮವಾಗಿ ಒಂದೊಂದೇ ಸೂಚನೆಯನ್ನು ಅನುಸರಿಸಿ ಚೌಕದಲ್ಲಿ ಚಿತ್ರ ಬರೆ.

1. ಒಂದು ಬಳೆಯ ಅಳತೆಯಷ್ಟು ವೃತ್ತವನ್ನು ಖಾಲಿ ಮನೆಯಲ್ಲಿ ಬರೆ.
2. ಆ ವೃತ್ತಕ್ಕೆ ತಾಗಿದಂತೆ ಎಡಭಾಗದಲ್ಲಿ 1 ರೂ ನಾಣ್ಯದ ಅಳತೆಯಷ್ಟು ಚಿಕ್ಕ ವೃತ್ತವನ್ನು ಬರೆ.
3. ದೊಡ್ಡ ವೃತ್ತಕ್ಕೆ ತಾಗಿದಂತೆ ಬಲಭಾಗದ ಮಧ್ಯದಿಂದ ಕೆಳಕ್ಕೆ ಒಂದು ಪುಟ್ಟ ಗೆರೆ ಹಾಕು.
4. ದೊಡ್ಡ ವೃತ್ತಕ್ಕೆ ತಾಗಿದಂತೆ ತಳಭಾಗಕ್ಕೆ ಮೇಲಿನಿಂದ ಕೆಳಗೆ ಚಿಕ್ಕದಾದ ನೇರವಾದ 2 ಗೆರೆಯನ್ನು ಹಾಕು.
5. ಚಿಕ್ಕ ವೃತ್ತದ ಮಧ್ಯದಲ್ಲಿ ಒಂದು ಚುಕ್ಕೆಯನ್ನು ಇಡು
6. ಚಿಕ್ಕ ವೃತ್ತಕ್ಕೆ ಎಡಭಾಗಕ್ಕೆ ತಾಗಿದಂತೆ ಮೇಲಿನಿಂದ ಕೆಳಕ್ಕೆ ಆರನ್ನು (6) ಬರೆಯುವಂತೆ ಬರೆ.


©KTBS Not to be republished

ಈಗ ಚಿತ್ರವನ್ನು ಗಮನಿಸಿ, ಹೆಸರನ್ನು ಬರೆ ____________________

ದಿನಾಂಕ : ..........................................  ಶಿಕ್ಷಕರ ಸಹಿ

# 3. ಉದ್ಯಾನವನದಲ್ಲಿ ಒಂದು ದಿನ






ಅಂದು ಭಾನುವಾರ. ಶಾಲೆಗೆ ರಜೆ. ರಾಜು, ಲತಾ, ಸವಿತ ಮತ್ತು ಅನುಶ್ರೀ ಅಜ್ಜಿಯೊಂದಿಗೆ ಉದ್ಯಾನವನಕ್ಕೆ ಹೊರಟರು.

ಅಜ್ಜಿ : ಮಕ್ಕಳೇ, ನಡೆಯುವಾಗ ಪಾದಚಾರಿಗಳ ರಸ್ತೆಯಲ್ಲಿ ನಡೆಯಿರಿ. ಇಕ್ಕೆಲಗಳಲ್ಲಿನ ಸೂಚನಾಫಲಕಗಳು ಹಾಗೂ ಭಿತ್ತಿಪತ್ರಗಳ ಕಡೆ ಲಕ್ಷ್ಯ ಕೊಡಿ.

ರಾಜು : ಅಜ್ಜಿ, ಸೂಚನಾಫಲಕಗಳು ಎಂದರೇನು?

ಅಜ್ಜಿ : ಮಕ್ಕಳೇ, ಯಾವುದೇ ಕೆಲಸವನ್ನು ಕ್ರಮಬದ್ಧವಾಗಿ ಮಾಡುವಂತೆ ತಿಳಿಸುವ ಸೂಚನೆಗಳನ್ನು ಒಳಗೊಂಡ ಫಲಕಗಳೇ ಸೂಚನಾಫಲಕಗಳು.

ಅನುಶ್ರೀ : ಅಜ್ಜಿ ! ಅಲ್ಲಿ "ಇದು ಶಾಲಾವಲಯ ನಿಧಾನವಾಗಿ ಚಲಿಸಿ" ಎಂದು ಬರೆದಿದೆ. ಏಕೆ?

ಸವಿತ : ಅನುಶ್ರೀ, ಶಾಲಾಮಕ್ಕಳು ಅಲ್ಲಿ ರಸ್ತೆ ದಾಟುವುದರಿಂದ ಚಾಲಕರು ವಾಹನಗಳನ್ನು ಜಾಗರೂಕತೆಯಿಂದ ಚಲಿಸಬೇಕು ಎನ್ನುವ ಕಾರಣಕ್ಕಾಗಿ ಈ ಫಲಕ ಹಾಕಿದೆ. ಸರಿಯೇ ಅಜ್ಜಿ ?

ಅಜ್ಜಿ : ಹೌದು ಸವಿತ.

(ರಾಜು ಪಲ್ಸ್ ಪೋಲಿಯೋದ ಭಿತ್ತಿಪತ್ರವನ್ನು ತೋರಿಸುತ್ತಾ)

ರಾಜು : ಅಜ್ಜಿ, ಅಲ್ಲಿ ಗೋಡೆಗೆ ಅಂಟಿಸಿರುವ ಚಿತ್ರವೂ ಸೂಚನಾಫಲಕವೇ?

ಅಜ್ಜಿ : ಅಲ್ಲ ರಾಜು, ಅದು ಭಿತ್ತಿಪತ್ರ.

ಅನುಶ್ರೀ : ಭಿತ್ತಿಪತ್ರಗಳೆಂದರೇನು ಅಜ್ಜಿ?

ದಿನಾಂಕ : .......................................... ಶಿಕ್ಷಕರ ಸಹಿ


©KTBS Not to be republished

# 3. ಉದ್ಯಾನವನದಲ್ಲಿ ಒಂದು ದಿನ



ಅಜ್ಜಿ : ಭಿತ್ತಿಪತ್ರಗಳೆಂದರೆ ಗೋಡೆಗೆ ಅಂಟಿಸುವ ಪ್ರಚಾರಪತ್ರಗಳು. ಭಿತ್ತಿಪತ್ರಗಳು ದೊಡ್ಡದಾಗಿದ್ದು, ಸಂದೇಶವನ್ನು ಚಿತ್ರಸಹಿತ ಹಾಗೂ ಸ್ಪಷ್ಟವಾಗಿ ತಿಳಿಸುತ್ತವೆ.

ಲತಾ : 'ಉದ್ಯಾನವನಕ್ಕೆ ದಾರಿ' ಎಂದು ಬರೆದಿರುವ ಫಲಕದಲ್ಲಿನ ಬಾಣದ ಗುರುತಿನಂತೆ ಬಲಕ್ಕೆ ತಿರುಗಿ, ಎಲ್ಲರೂ ಒಳಗೆ ಹೋಗೋಣ.




(ಲತಾ ಹೂವನ್ನು ಕೀಳಲು ಉದ್ಯಾನವನದೊಳಗೆ ಓಡಿ ಹೋಗುವಳು)

ರಾಜು : ಲತಾ, ಹೂವನ್ನು ಕೀಳಬೇಡ. ಅಲ್ಲಿರುವ ಫಲಕವನ್ನು ನೀನು ಗಮನಿಸಲಿಲ್ಲವೇ?

ಲತಾ : ಅಯ್ಯೋ ! ನಾನು ನೋಡಲಿಲ್ಲ, ಕ್ಷಮಿಸು. (ಕೈ ಹಿಂದಕ್ಕೆ ತೆಗೆದುಕೊಳ್ಳುವಳು.)

ಅನುಶ್ರೀ : ಅಲ್ಲಿ ನೋಡಿ, ಬಣ್ಣ ಬಣ್ಣದ ಗುಲಾಬಿ, ಮಲ್ಲಿಗೆ, ಸಂಪಿಗೆ, ಸೇವಂತಿಗೆ, ದಾಸವಾಳ ಹೂಗಳು ಎಷ್ಟು ಸುಂದರವಾಗಿ ಅರಳಿವೆ. ಅವುಗಳ ಮೇಲೆ ಹಾರಾಡುತ್ತಿರುವ ಬಣ್ಣ ಬಣ್ಣದ ಚಿಟ್ಟೆಗಳು ಎಷ್ಟೊಂದು ಸೊಗಸಾಗಿವೆ !

ಲತಾ : ಈ ಹೂಗಳ ಪರಿಮಳವಂತೂ ಎಲ್ಲೆಡೆ ಹರಡಿ ಮನಸ್ಸಿಗೆ ಮುದ ನೀಡುತ್ತಿದೆ.

ಸವಿತ : ಈ ಉದ್ಯಾನವನದಲ್ಲಿ ಹಸಿರು ಹುಲ್ಲು ಹಾಸು ಎಷ್ಟು ಸೊಂಪಾಗಿ ಬೆಳೆದಿದೆ !


ರಾಜು : ಆಹಾ ! ಅಲ್ಲಿ ನೋಡು...................... ಪುಟಿಯುತ್ತಿರುವ ಕಾರಂಜಿ, ಕೊಳದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿರುವ ಬಾತುಕೋಳಿಗಳು ಎಲ್ಲರ ಕಣ್ಮನ ಸೆಳೆಯುತ್ತಿವೆ.

ದಿನಾಂಕ : ......................................... ಶಿಕ್ಷಕರ ಸಹಿ

©KTBS Not to be republished

# 3. ಉದ್ಯಾನವನದಲ್ಲಿ ಒಂದು ದಿನ






ಸವಿತ : ರಾಜು, ಇಲ್ಲಿ "ಕೊಳದೊಳಗೆ ಇಳಿಯಬಾರದು" ಎಂದು ಬರೆದಿದೆ ನೋಡು !

ಲತಾ : ನನಗೆ ಬಾಯಾರಿಕೆಯಾಗಿದೆ. ನೀರು ಕುಡಿಯಲು ನಳದ ಬಳಿ ಹೋಗೋಣ.

(ಎಲ್ಲರೂ ನಳದ ಬಳಿ ಬರುವರು.)

ಅಜ್ಜಿ : ನೀರನ್ನು ಪೋಲು ಮಾಡಬೇಡಿ.

ಅನುಶ್ರೀ : ಹೌದು ಅಜ್ಜಿ "ನೀರು ಅಮೂಲ್ಯವಾದದ್ದು, ಮಿತವಾಗಿ ಬಳಸಿ" ಎಂಬ ಭಿತ್ತಿಪತ್ರ ಇಲ್ಲಿ ಅಂಟಿಸಿದ್ದಾರೆ.

ಅಜ್ಜಿ : ಹೌದು, ನೀರು ಜೀವಜಲ. ಮುಂದಿನ ಪೀಳಿಗೆಗಾಗಿ ಇದನ್ನು ಸಂರಕ್ಷಿಸಬೇಕಾದದು ನಮ್ಮೆಲ್ಲರ ಆದ್ಯ ಕರ್ತವ್ಯ. ನೀವೆಲ್ಲರೂ ಉದ್ಯಾನವನದಲ್ಲಿ ಸ್ವಲ್ಪಸಮಯ ಆಟವಾಡಿರಿ. ನಂತರ ಮನೆಗೆ ಹೋಗೋಣ.

(ಎಲ್ಲರೂ ಆಟವಾಡಲು ತೆರಳುವರು)

---

**ಹೊಸ ಪದಗಳ ಅರ್ಥ :**

ಇಕ್ಕೆಲ – ಎರಡು ಕಡೆ
ಲಕ್ಷ್ಯ – ಗಮನ
ಫಲಕ – ಹಲಗೆ
ಪರಿಮಳ – ಸುಗಂಧ, ಸುವಾಸನೆ
ಕಾರಂಜಿ – ಚಿಲುಮೆ
ಪೋಲು – ಹಾಳು, ಅಪವ್ಯಯ
ಅಮೂಲ್ಯ – ಬೆಲೆಕಟ್ಟಲಾಗದ

**ಗಮನಿಸಿ ತಿಳಿ**

ಪಾದಚಾರಿ :
ಕಾಲುನಡಿಗೆಯಿಂದ ಸಾಗುವವನು

ದಿನಾಂಕ : ..........................................   ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ



ಅ) 'ಅ' ಪಟ್ಟಿಯಲ್ಲಿರುವ ಪದಗಳಿಗೆ ಸರಿಹೊಂದುವ ಪದಗಳನ್ನು ಕೆಳಗಿನ ಚೌಕದಿಂದ ಆರಿಸಿ 'ಬ' ಪಟ್ಟಿಯಲ್ಲಿ ಬರೆ.

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| 1. ನೀರು | ______________ |
| 2. ಹೂವು | ______________ |
| 3. ಲಕ್ಷ್ಯ | ______________ |
| 4. ಕಾರಂಜಿ | ______________ |

ಸುಮ, ಚಿಲುಮೆ, ಜಲ, ಗಮನ, ಫಲಕ

ಆ) ಆವರಣದಲ್ಲಿನ ಸೂಕ್ತ ಪದ ಆರಿಸಿ ಬಿಟ್ಟ ಸ್ಥಳದಲ್ಲಿ ಬರೆ.

(ಅಮೂಲ್ಯ, ಪೋಲು, ಬಾತುಕೋಳಿಗಳು, ಭಿತ್ತಿಪತ್ರಗಳು, ಸೂಚನಾಫಲಕಗಳು)

1. ಗೋಡೆಗೆ ಅಂಟಿಸುವ ಪ್ರಚಾರ ಪತ್ರಗಳೇ ______________
2. ನೀರನ್ನು ______________ ಮಾಡಬಾರದು.
3. ಕೊಳದಲ್ಲಿ ______________ ಸ್ವಚ್ಛಂದವಾಗಿ ವಿಹರಿಸುತ್ತವೆ.
4. ನೀರು ______________ ಮಿತವಾಗಿ ಬಳಸಿ.

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



**ಚಟುವಟಿಕೆ 1 :**

ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.

ಮಾದರಿ :– ಪೋಲು : ನೀರನ್ನು ಪೋಲು ಮಾಡಬಾರದು.

1. ಶಿಸ್ತು :
2. ಕೊಳ :
3. ಅಮೂಲ್ಯ :
4. ಭಿತ್ತಿಪತ್ರ :

**ಚಟುವಟಿಕೆ 2 :**

ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಮಕ್ಕಳಿಗೆ ಏನನ್ನು ಗಮನಿಸಬೇಕೆಂದು ಅಜ್ಜಿ ಹೇಳಿದರು?
2. ತೋಟದಲ್ಲಿ ಯಾವ ಯಾವ ಹೂಗಳು ಅರಳಿದ್ದವು ?
3. ಶಾಲಾ ವಲಯದಲ್ಲಿದ್ದ ಸೂಚನಾಫಲಕದಲ್ಲಿ ಏನೆಂದು ಬರೆದಿತ್ತು?
4. ರಾಜು ತೋರಿಸಿದ ಭಿತ್ತಿ ಪತ್ರ ಯಾವುದು?
5. ನೀರನ್ನು ಏಕೆ ಪೋಲು ಮಾಡಬಾರದು?
6. ಶಾಲೆಯ ಬಳಿ ಇರುವ ಸೂಚನಾಫಲಕ ಯಾವುದು?
7. ಕೊಳದ ಬಳಿ ಇದ್ದ ಸೂಚನಾ ಫಲಕ ಯಾವುದು?

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ

**ಇ) ಈ ಮಾತನ್ನು ಯಾರು – ಯಾರಿಗೆ ಹೇಳಿದರು ?**

**ಮಾದರಿ:–**

**"ಸೂಚನಾಫಲಕಗಳು ಎಂದರೇನು?"**

ಯಾರು ಹೇಳಿದರು : ರಾಜು ಹೇಳಿದನು.

ಯಾರಿಗೆ ಹೇಳಿದರು : ಅಜ್ಜಿಗೆ ಹೇಳಿದನು.

1. **"ಅಲ್ಲ, ಅದು ಭಿತ್ತಿ ಪತ್ರ"**

ಯಾರು ಹೇಳಿದರು : ______

ಯಾರಿಗೆ ಹೇಳಿದರು : ______

2. **"ಅಯ್ಯೋ! ನಾನು ನೋಡಲಿಲ್ಲ. ಕ್ಷಮಿಸು"**

ಯಾರು ಹೇಳಿದರು : ______

ಯಾರಿಗೆ ಹೇಳಿದರು : ______

3. **"ಇದು ಶಾಲಾವಲಯ ನಿಧಾನವಾಗಿ ಚಲಿಸಿ"**

ಯಾರು ಹೇಳಿದರು : ______

ಯಾರಿಗೆ ಹೇಳಿದರು : ______

4. **"ನೀರನ್ನು ಪೋಲು ಮಾಡಬೇಡಿ"**

ಯಾರು ಹೇಳಿದರು : ______

ಯಾರಿಗೆ ಹೇಳಿದರು : ______

ದಿನಾಂಕ : ..........................................  ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ



ಅ) ಕೊಟ್ಟಿರುವ ಪದ ಗಮನಿಸಿ ವಿರುದ್ಧಾರ್ಥಕ ಪದ ಬರೆ.

ಜಾಗರೂಕ X ______________________

ಶಿಸ್ತು X ______________________

ಮೇಲೆ X ______________________

ಮುಂದೆ X ______________________

ಸರಿ X ______________________

ಆ) ಗುಂಪಿಗೆ ಸೇರದ ಪದ ಗುರುತಿಸಿ ಚೌಕದಲ್ಲಿ ಬರೆ.

1. ಸುಂದರ, ಚಂದ, ಹಂದರ, ಸೊಬಗು [ ]
2. ನೀರು, ಜಲ, ಉದಕ, ನೆಲ [ ]
3. ಹೂ, ಕುಸುಮ, ಜಾಜಿ, ಪುಷ್ಪ [ ]
4. ಕಾರಂಜಿ, ಬುಗ್ಗೆ, ಚಿಲುಮೆ, ಜಲಪಾತ [ ]

ಇ) ಈ ಅಕ್ಷರಗಳನ್ನು ಸರಿಯಾದ ರೂಪದಲ್ಲಿ ಜೋಡಿಸಿ ಪದ ರಚಿಸಿ ಬರೆ.

1. ನ ಉ ವ ದ್ಯಾ ನ = [ ]
2. ತ್ರ ತ್ತಿ ಛ ಪ = [ ]
3. ಕ ಸೂ ಫ ನಾ ಚ ಲ = [ ]
4. ಣೆ ರ ಹ ದಾ ಉ = [ ]

ದಿನಾಂಕ : ...........................................

ಶಿಕ್ಷಕರ ಸಹಿ


©KTBS Not to be republished

# ಭಾಷಾಭ್ಯಾಸ



ಅ) ಹಣ್ಣು, ಹೂ, ಎಲೆಗಳಲ್ಲಿರುವ ಒಂದೊಂದು ಪದವನ್ನು ಬಳಸಿ ವಾಕ್ಯ ರಚಿಸಿ ಕೆಳಗಿನ ಸಾಲುಗಳಲ್ಲಿ ಬರೆ.







ಮಾದರಿ : ವಿಮಲ ಆಟ ಆಡಿದಳು.

1. ______________________________

2. ______________________________

3. ______________________________

4. ______________________________

5. ______________________________

6. ______________________________

7. ______________________________

ದಿನಾಂಕ : ..........................................

ಶಿಕ್ಷಕರ ಸಹಿ


©KTBS Not to be republished

3 4

# ಸೂಚನೆಗಳು

**40**

ಚಿತ್ರಗಳನ್ನು ಗಮನಿಸಿ, ಸೂಚನೆಗಳನ್ನು ಆಯ್ದು ಕೆಳಗಿನ ಸಾಲುಗಳಲ್ಲಿ ಬರೆ.







ದಿನಾಂಕ : ..........................................

ಶಿಕ್ಷಕರ ಸಹಿ


©KTBS Not to be republished

3 4

# ಹೊಂದಿಸು

41

* ಚಿತ್ರದ ಮುಂದೆ ನೀಡಿರುವ ಸೂಚನೆಗಳು ಅದಲು ಬದಲಾಗಿವೆ.
* ಚಿತ್ರದ ಮುಂದೆ ಸರಿ ಹೊಂದುವ ಸೂಚನೆಯನ್ನು ಬರೆ.

| | |
|---|---|
|  | ಕಸವನ್ನು ಕಸದ ತೊಟ್ಟಿಯಲ್ಲಿಯೇ ಹಾಕಿರಿ.<br>________________<br>________________ |
|  | ಪಾದಚಾರಿಗಳೇ, ಝೀಬ್ರಾಪಟ್ಟಿಯಲ್ಲಿ ರಸ್ತೆ ದಾಟಿರಿ.<br>________________<br>________________ |
|  | ಶೌಚಾಲಯ ಬಳಸಿದ ನಂತರ ಸಾಬೂನಿನಿಂದ ಕೈ ತೊಳೆಯಿರಿ.<br>________________<br>________________ |
|  | ನೀರನ್ನು ಪೋಲು ಮಾಡಬೇಡಿರಿ.<br>________________<br>________________ |

Not ©KTBS to be republished

ದಿನಾಂಕ : ..........................................

ಶಿಕ್ಷಕರ ಸಹಿ

# ಓದಿ ಉತ್ತರಿಸು

**ವಿಶೇಷ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ**



ಲಸಿಕೆ ಹಾಕಿಸಿ ಮಗುವಿನ ಜೀವ ಉಳಿಸಿ

ನಿಮ್ಮ ಮನೆಗೆ ಸಮೀಪದ ಪಲ್ಸ್ ಪೋಲಿಯೋ ಬೂತಿನಲ್ಲಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ತಪ್ಪದೆ ಎರಡು ಸುತ್ತಿನಲ್ಲೂ ಪೋಲಿಯೋ ಲಸಿಕೆ ಹಾಕಿಸಿ.

ಪ್ರಕಟಣೆ : ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

1. ಈ ಭಿತ್ತಿಪತ್ರವು ಯಾವ ಕಾರ್ಯಕ್ರಮಕ್ಕೆ ಸಂಬಂಧಪಟ್ಟಿದೆ ?

_______________

2. ಪಲ್ಸ್ ಪೋಲಿಯೋ ಲಸಿಕೆಯನ್ನು ಎಷ್ಟು ಸುತ್ತಿನಲ್ಲಿ ಹಾಕಲಾಗುತ್ತಿದೆ ?

_______________

3. ಈ ಭಿತ್ತಿಪತ್ರವನ್ನು ಯಾವ ಇಲಾಖೆಯಿಂದ ಪ್ರಕಟಿಸಲಾಗಿದೆ ?

_______________

4. ಈ ಚಿತ್ರದಲ್ಲಿರುವ ಘೋಷಣಾ ವಾಕ್ಯವನ್ನು ಬರೆಯಿರಿ.

_______________

ದಿನಾಂಕ : ..........................................                ಶಿಕ್ಷಕರ ಸಹಿ

©KTBS Not to be republished

3 | 4

# ಉತ್ತರಿಸು



*ಈ ಕೆಳಗಿನ ಸೂಚನಾಫಲಕಗಳನ್ನು ಯಾವ ಯಾವ ಸ್ಥಳದಲ್ಲಿ ಹಾಕಬಹುದು (ಬಳಸಬಹುದು) ಎಂಬುದನ್ನು ಪಕ್ಕದ ಚೌಕದಲ್ಲಿ ಬರೆ.

ಸಾಲಾಗಿ ಬನ್ನಿ →

ಸ್ವಚ್ಛತೆಯನ್ನು ಕಾಪಾಡಿ →

ಪಾದರಕ್ಷೆಗಳನ್ನು ಇಲ್ಲಿಯೇ ಬಿಡಿ →

©KTBS Not to be republished

ದಿನಾಂಕ : ..........................................

ಶಿಕ್ಷಕರ ಸಹಿ

# 4. ಮುದ್ದು ಕಂದ



ಹಾವಿನ ಹೆಡಿ ಚಂದ । ಮಾವಿನ ಮಿಡಿ ಚಂದ ।
ಹಾರ್‍ಯಾಡಿ ಬರುವ ಗಿಳಿ ಚಂದ । ನನ ಕಂದ ॥
ನೀ ಇದ್ದರ ನನ್ನ ಮನಿ ಚಂದ ॥

ನನ್ನ ಕಂದ ಮುದ್ದು । ಹೊನ್ನ ತಾವರಿ ಮುದ್ದು ।
ಹಣ್ಣುಳ್ಳ ಗಿಡಕ ಗಿಳಿ ಮುದ್ದು । ಕಂದವ್ವ ॥
ನೀ ಮುದ್ದು ನನ್ನ ಬಳಗಾಕ ॥

ಹಸರಂಗಿ ತೊಡಸೀನ । ಹಾಲ್ಗಡಗ ಇಡಸೀನ ॥
ಹಳ್ಳಕ್ಕ ನೀನು ಬರಬ್ಯಾಡ । ನನಕಂದ ॥
ಬೆಳ್ಳಕ್ಕಿ ಹಿಂಡು ಬೆದರ್‍ಯಾವ ॥

ಗುಜ್ಜಿ ನನ ಕಂದಯ್ಯನ । ಗೆಜ್ಜಿ ಸಪ್ಪಳ ಕೇಳಿ ।
ನಿಬ್ಬಣದೆತ್ತು ಬೆದರ್‍ಯಾವ । ಮದ್ಯಾಣದ ॥
ಹುಲ್ಲು ತಿನ್ನೊದ ಮರೆತಾವ ॥

ತವರೂರಿಗ್ಹೋದಾಗ । ನವಿಲ ಬಣ್ಣದ ಪಕ್ಷಿ ।
ತಲಿಬ್ಯಾನಿಯೆದ್ದು ಅಳುತ್ತಿತ್ತ । ಕಂದನ ॥
ಚಲುವೀಕಿ ನೋಡಿ ನಗುತಿತ್ತ ॥

– ಜನಪದ ಸಂಗ್ರಹ

---

**ಹೊಸ ಪದಗಳ ಅರ್ಥ**

ಹಳ್ಳ – ತೊರೆ, ಹೊಳೆ
ಚಂದ – ಸೊಗಸು
ಬಳಗ – ಕುಟುಂಬ, ಪರಿವಾರ
ಸಪ್ಪಳ – ಶಬ್ದ, ಸದ್ದು
ತಲಿಬ್ಯಾನಿ – ತಲೆನೋವು
ಮಿಡಿ – ಹೀಚುಕಾಯಿ, ಎಳಗಾಯಿ
ಹೊನ್ನು – ಚಿನ್ನ, ಬಂಗಾರ
ಗುಜ್ಜಿ – ಕುಳ್ಳ, ಕುಬ್ಜ ಪುಟ್ಟ
ಬೆದರು – ಹೆದರು, ಗಾಬರಿ

**ಗಮನಿಸಿ ತಿಳಿ :**

ಹಸರಂಗಿ : ಹಸಿರು ಬಣ್ಣದ ಅಂಗಿ
ಬೆಳ್ಳಕ್ಕಿ : ಒಂದು ಜಾತಿಯ ಬಿಳಿ ಹಕ್ಕಿ
ಹಾಲ್ಗಡಗ : ಪಂಚ ಲೋಹದಿಂದ ತಯಾರಿಸಿದ ಕಡಗ (ಮಗುವಿನ ಕಾಲಿಗೆ ಹಾಕುವ ಕಡಗ)
ನಿಬ್ಬಣ : ಮದುವೆಯ ಮೆರವಣಿಗೆ (ದಿಬ್ಬಣ)
ಜನಪದ ಗೀತೆ : ಜನರು ತಮ್ಮ ಅನುಭವಗಳಿಂದ ರಚಿಸಿರುವ ಹಾಡುಗಳು

ದಿನಾಂಕ : ..........................................
ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ



**ಸೂಚನೆ :** ಈ ಪದಗಳಿಗೆ ಸುಳಿವು ಬಟ್ಟಲಿನಲ್ಲಿರುವ ಅರ್ಥವನ್ನು ಆರಿಸಿ ಮಾದರಿಯಂತೆ ಬರೆ.

**ಮಾದರಿ :** ಚಂದ ಸೊಗಸು

ತಲಿಬ್ಯಾನಿ ____________


ಬಳಗ ____________

ಗುಜ್ಜೆ ____________

ಮಿಡಿಗಾಯಿ ____________

ಹೊನ್ನು ____________

©KTBS Not to be republished




ದಿನಾಂಕ : ........................................ ಶಿಕ್ಷಕರ ಸಹಿ

# ಅಭ್ಯಾಸ

ಅ) ಈ ಕೆಳಗಿನ ವಾಕ್ಯಗಳನ್ನು ನಕಲು ಮಾಡಿ ಬರೆ.

ಹಣ್ಣುಳ್ಳ ಗಿಡಕ ಗಿಣಿ ಮುದ್ದು

ಹಳ್ಳಕ್ಕ ನೀನು ಬರಬೇಡ ನನಕಂದ

ಬೆಳ್ಳಕ್ಕಿ ಹಿಂಡು ಬೆದರ್‍ಯಾವ ಮುದ್ದುಕಂದ

ನನ್ನ ಕಂದ ಮುದ್ದು ಹೊನ್ನ ತಾವರಿ ಮುದ್ದು

ದಿನಾಂಕ : ............................................ ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ. ವಾಕ್ಯಗಳನ್ನು ನಕಲು ಮಾಡು.

ಮಾದರಿ :

ಚಂದ : ಹಕ್ಕಿಗಳ ಕಲರವ ಕೇಳಲು ಬಲು ಚಂದ.

ಹಕ್ಕಿಗಳ ಕಲರವ ಕೇಳಲು ಬಲು ಚಂದ.

1. ಸಪ್ಪಳ :

2. ಗುಜ್ಜಿ :

3. ನಿಬ್ಬಣ :

4. ಬೆದರು :

©KTBS Not to be republished

ದಿನಾಂಕ : ..........................................

ಶಿಕ್ಷಕರ ಸಹಿ

# ಪ್ರಶ್ನೋತ್ತರ



## ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

**1.** ಮನೆಗೆ ಯಾರು ಚಂದ ?

______________________________

2. ಹಣ್ಣುಳ್ಳ ಗಿಡಕ್ಕೆ ಗಿಳಿ ಮುದ್ದು ಎಂದು ಹೇಳಿದವರು ಯಾರು ?

______________________________

3. ಕಂದನಿಗೆ ಎಂತಹ ಅಂಗಿ ತೊಡಿಸಲಾಗಿದೆ ?

______________________________

4. ತಾಯಿ, ಕಂದನನ್ನು ಎಲ್ಲಿಗೆ ಬರಬೇಡ ಎಂದು ಹೇಳಿದಳು ?

______________________________

5. ತಾಯಿ ಮಗುವಿಗೆ ಎಂತಹ ಕಡಗ ಹಾಕಿದ್ದಾಳೆ ?

______________________________

6. 'ಮುದ್ದು ಕಂದ' ಪದ್ಯದಲ್ಲಿ ನಿನಗೆ ಇಷ್ಟವಾದ ಒಂದು ಸಾಲು ಬರೆ.

______________________________

7. 'ಮುದ್ದು ಕಂದ' ಪದ್ಯದಲ್ಲಿ ಮಗುವನ್ನು ಯಾರಿಗೆ ಹೋಲಿಸಲಾಗಿದೆ ?

______________________________

## ಇ) ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬು.

1. ಹಾರ್‍ಯಾಡಿ ಬರುವ ____________ ಚಂದ

2. ಹಸರಂಗಿ ತೊಡಸೀನ ____________ ಇಡಸೀನ

3. ಕಂದಯ್ಯನ ____________ ಸಪ್ಪಳ ಕೇಳಿ ನಿಬ್ಬಣದೆತ್ತುಗಳು ಬೆದರಿದವು.

ದಿನಾಂಕ : ............................................ ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ



ಅ) ಪದ್ಯ ಭಾಗವನ್ನು ಪೂರ್ಣಗೊಳಿಸು. ಪ್ರಾಸ ಪದಗಳಿಗೆ ಗೆರೆ ಎಳೆ.

ಹಾವಿನ ಹೆಡಿ ಚಂದ । ____________________।
ಹಾರ್‍ಯಾಡಿ ಬರುವ ____________________॥
ನೀ ಇದ್ದರ ____________________॥

____________________ । ಹೊನ್ನ ತಾವರಿ ಮುದ್ದು।
____________________ ಮುದ್ದು । ಕಂದವ್ವ ॥
____________________ ನನ್ನ ಬಳಗಾಕ ॥

ಹಸರಂಗಿ __________ ಹಾಲ್ಗಡಗ __________ ।
ಹಳ್ಳಕ್ಕ ____________________ ನನ ಕಂದ ॥
ಬೆಳ್ಳಕ್ಕಿ ____________________॥

ಗುಜ್ಜಿ ____________________ ಕೇಳಿ ।
ನಿಬ್ಬಣದೆತ್ತು ____________________ ॥
ಹುಲ್ಲು ____________________ ॥

ತವರೂರಿಗ್ಹೋದಾಗ ____________________।
____________________। ಕಂದನ ॥
____________________ ನಗುತಿತ್ತ ॥

ದಿನಾಂಕ : ...........................................

ಶಿಕ್ಷಕರ ಸಹಿ



©KTBS Not to be republished

## ಭಾಷಾಭ್ಯಾಸ



ಅ) 'ಅ' ಭಾಗದ ಎರಡೂ ಪದಗಳನ್ನು ಓದು. ಎರಡೂ ಪದಗಳಲ್ಲಿ ಸರಿಯಾದ ರೂಪವಿರುವ ಪದವನ್ನು ಆಯ್ದುಕೊಂಡು 'ಬ' ಭಾಗದಲ್ಲಿ ತಪ್ಪಿಲ್ಲದೆ ಬರೆ.

ಮಾದರಿ :

| | |
|---|---|
| ಹಾರ್‍ಯಾಡಿ / ಆರ್‍ಯಾಡಿ | ಹಾರ್‍ಯಾಡಿ |

| 'ಅ' ಭಾಗ | 'ಬ' ಭಾಗ |
|---|---|
| ಅಣ್ಣುಳ್ಳ / ಹಣ್ಣುಳ್ಳ | |
| ಹಸರಂಗಿ / ಅಸರಂಗಿ | |
| ಅಳ್ಳಕ್ಕ / ಹಳ್ಳಕ್ಕ | |
| ಹಳ್ಳ / ಅಳ್ಳ | |
| ಅಳುತ್ತಿತ್ತ / ಹಳುತ್ತಿತ್ತ | |

ದಿನಾಂಕ : ..........................................


ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ



ಸೂಚನೆ : ದ್ರಾಕ್ಷಿ ಗೊಂಚಲಿನಲ್ಲಿರುವ ಪದಗಳನ್ನು ಮತ್ತು ಸಂಖ್ಯೆಗಳನ್ನು ಓದು. ಮುಂದಿನ ಪುಟದಲ್ಲಿ ನೀಡಲಾದ ಮಾದರಿಯನ್ನು ಗಮನಿಸಿ ಸಂಖ್ಯೆಗನುಗುಣವಾಗಿ ವಾಕ್ಯ ರಚಿಸಿ ಬರೆ.




Not to be republished ©KTBS

4 3

# ಭಾಷಾಭ್ಯಾಸ

54

ಮಾದರಿ :

3, 9 = ದೇಶ ತಿರುಗು ________ ಕೋಶ ಓದು ________

4, 1, 11 = ________ ________ ________

2, 10, 6 = ________ ________ ________

8, 14 = ________ ________

5, 22, 13, 7 = ________ ________ ________ ________

15, 16, 12, 21 = ________ ________ ________ ________

17, 18, 19, 20 = ________ ________ ________ ________

©KTBS Not to be republished


ದಿನಾಂಕ : ..........................................

ಶಿಕ್ಷಕರ ಸಹಿ

# ಚಿತ್ರ ನೋಡಿ ಉತ್ತರಿಸು



ಅ) ಈ ಚಿತ್ರವನ್ನು ಗಮನಿಸು, ಐದು ಪದಗಳನ್ನು ಬರೆ.
ಪ್ರತಿ ಪದಕ್ಕೂ ಒಂದು ಸ್ವಂತ ವಾಕ್ಯವನ್ನು ರಚಿಸಿ ಬರೆ.
ಅ) ಚಿತ್ರ ನೋಡಿ ಪ್ರಶ್ನೆಗಳಿಗೆ ಉತ್ತರ ಬರೆ.



© KTBS Not to be republished

| ಪದಗಳು | | ವಾಕ್ಯ ರಚನೆ |
|---|---|---|
| ಮಾದರಿ : ಪಕ್ಷಿ | – | ಪಕ್ಷಿಗಳು ಆಕಾಶದಲ್ಲಿ ಹಾರುತ್ತಿವೆ. |

1. ______
2. ______
3. ______
4. ______
5. ______

# ಚಿತ್ರ ನೋಡಿ ಉತ್ತರಿಸು



## ಆ) ಉತ್ತರಿಸು.

1. ಆಕಾಶದಲ್ಲಿ ಎಷ್ಟು ಪಕ್ಷಿಗಳು ಹಾರಾಡುತ್ತಿವೆ ?

2. ಹುಡುಗರು ಎಲ್ಲಿ ಆಟವಾಡುತ್ತಿದ್ದಾರೆ ?

3. ಕೆರೆಯ ಬಳಿ ಯಾವ ಮರವಿದೆ?

4. ಕೆರೆಯ ಬಳಿ ಎಷ್ಟು ಬೆಟ್ಟಗಳಿವೆ?

5. ಕೆರೆಯಲ್ಲಿ ನೀನು ಈಜುವಾಗ ಎಚ್ಚರ ವಹಿಸಬೇಕು ಏಕೆ?

## ಇ) ನಿನ್ನ ಗೆಳೆಯ/ಗೆಳತಿ ಹೇಳಿದ 5 ಪದಗಳನ್ನು ಉಕ್ತಲೇಖನ ಬರೆ.

1. 
2. 
3. 
4. 
5. 

ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# ಪದ ರಚನೆ

ಸೂಚನೆ : 1. ಕೆಳಗೆ ನೀಡಿರುವ ಅದಲು ಬದಲಾದ ಅಕ್ಷರಗಳಿಂದ ಅರ್ಥ ಪೂರ್ಣ ಪದ ರಚಿಸಿ ಕೆಳಗಿನ ಚೌಕಗಳಲ್ಲಿ ಬರೆ.

2. ವೃತ್ತದಲ್ಲಿರುವ ಅಕ್ಷರಗಳನ್ನು ಮಾತ್ರ ಆಯ್ದುಕೊಂಡು ಅರ್ಥಪೂರ್ಣ ವಾಕ್ಯ ರಚಿಸಿ, ಕೆಳಗೆ ನೀಡಿರುವ ವೃತ್ತಗಳಲ್ಲಿ ಬರೆದು ಓದು.

ಡ ಲ್ಲ ಗ ಹಾ

ದ ಬೆ ರ್‍ಯಾ ವ

ಡಿ ಮಿ ಮಾ ನ ವಿ

ಳ ಬ ಗ

ರೂ ತ ರು ವ

ನ್ನ ಹೊ ತಾ ರಿ ವ

ಡ ಗಿ

ಳಿ ಗಿ

ದಿ ಚಂ ರ

ಕಂ ವ್ವ ದ



ದಿನಾಂಕ : ..........................................

ಶಿಕ್ಷಕರ ಸಹಿ

©KTBS Not to be republished

# ವಾಕ್ಯ ರಚನೆ

ಅ) ಚಿತ್ರಕ್ಕೆ ಸಂಬಂಧಿಸಿದ ಅರ್ಥ ಪೂರ್ಣ ವಾಕ್ಯವನ್ನು ಸೂಕ್ತ ಅಂತರದೊಂದಿಗೆ ಸ್ಪುಟವಾಗಿ ಬರೆ.







©KTBS Not to be republished

ದಿನಾಂಕ : ..........................................

ಶಿಕ್ಷಕರ ಸಹಿ

# ಹೊಂದಿಸು



**ಸೂಚನೆ : 1. ಈ ಕೆಳಗಿನ ವಾಕ್ಯಗಳನ್ನು ಮತ್ತು ಚಿತ್ರಗಳನ್ನು ಗಮನಿಸು.**

**2. ಚಿತ್ರಕ್ಕೆ ಸರಿ ಹೊಂದುವ ವಾಕ್ಯವನ್ನು ಚಿತ್ರದ ಮುಂದೆ ನೀಡಿರುವ ಸಾಲುಗಳಲ್ಲಿ ಸ್ಫುಟವಾಗಿ ಬರೆ.**

-----------

1. ಸುಮ ಪಂಜರದಲ್ಲಿರುವ ಹುಲಿಯನ್ನು ನೋಡುತ್ತಿದ್ದಾಳೆ.
2. ಮರದ ಮೇಲಿರುವ ಗಿಳಿಗಳನ್ನು ಸೋಮು ನೋಡುತ್ತಿದ್ದಾನೆ.
3. ಸೋಮು ಮತ್ತು ಸುಮ ಪ್ರಾಣಿ ಸಂಗ್ರಹಾಲಯಕ್ಕೆ ಹೋದರು.
4. ಅಲ್ಲಿ ಅನೇಕ ಪ್ರಾಣಿಗಳನ್ನು ನೋಡಿದರು.
5. ಅವರಿಗೆ ಕರಡಿ ಎಂದರೆ ತುಂಬಾ ಖುಷಿ.




______________________________

______________________________



______________________________

______________________________



______________________________

______________________________



______________________________

______________________________



______________________________

______________________________

ದಿನಾಂಕ : ..........................................                ಶಿಕ್ಷಕರ ಸಹಿ

Not ©KTBS to be republished

# 5. ಚಿನ್ನದ ಬೊಂಬೆಗಳು





(ವಿಕ್ರಮಾದಿತ್ಯನ ಆಸ್ಥಾನಕ್ಕೆ ಬೊಂಬೆ ತಯಾರಕನೊಬ್ಬ ಮೂರು ಬೊಂಬೆಗಳನ್ನು ಹಿಡಿದುಕೊಂಡು ಪ್ರವೇಶಿಸಿದನು.)

**ಬೊಂಬೆ ತಯಾರಕ** : ಮಹಾರಾಜ, ಈ ಬೊಂಬೆಗಳನ್ನು ತಾವು ಕೊಂಡು ನನ್ನನ್ನು ಕಾಪಾಡಬೇಕು.

**ರಾಜ** : ಬೊಂಬೆಗಳು ಚೆನ್ನಾಗಿವೆ. ಇವುಗಳ ಬೆಲೆ ಎಷ್ಟು ?

**ಬೊಂಬೆ ತಯಾರಕ** : ಪ್ರಭು, ಇವುಗಳ ವೈಶಿಷ್ಟ್ಯವನ್ನು ಮೊದಲು ತಮಗೆ ತಿಳಿಸುತ್ತೇನೆ. ನಂತರ ಬೊಂಬೆಗಳ ಬೆಲೆ ನಿರ್ಧರಿಸಬಹುದು.

**ರಾಜ** : ಓಹೋ ! ಹಾಗೇನು ? ಆಯಿತು. ಇವುಗಳ ವೈಶಿಷ್ಟ್ಯತೆ ತಿಳಿಸು.

**ಬೊಂಬೆ ತಯಾರಕ** : ನೋಡಿ ಪ್ರಭು, ಈ ದಾರವನ್ನು ಮೊದಲ ಬೊಂಬೆಯ ಒಂದು ಕಿವಿಯಲ್ಲಿ ಹಾಕಿದರೆ ಮತ್ತೊಂದು ಕಿವಿಯಿಂದ ಹೊರಗೆ ಬರುತ್ತದೆ. ಎರಡನೆಯ ಬೊಂಬೆಯ ಕಿವಿಯಲ್ಲಿ ದಾರ ಹಾಕಿದರೆ ಬಾಯಿಯಿಂದ ಹೊರಬರುತ್ತದೆ. ಇನ್ನು ಮೂರನೆಯ ಬೊಂಬೆಯ ಕಿವಿಯಲ್ಲಿ ದಾರ ಹಾಕಿದರೆ ಇನ್ನೊಂದು ಕಿವಿಯಲ್ಲಾಗಲಿ ಅಥವಾ ಬಾಯಿಯಲ್ಲಾಗಲಿ ಬರುವುದಿಲ್ಲ. ತಲೆಯೊಳಗೆ ಸುತ್ತಿಕೊಳ್ಳುತ್ತದೆ.

**ರಾಜ** : ಶಹಭಾಷ್, ನಿನ್ನ ಬೊಂಬೆಗಳು ವಿಚಿತ್ರವಾಗಿವೆ. ನಮ್ಮ ಪಂಡಿತರು ಇವುಗಳ ಬೆಲೆ ನಿರ್ಧರಿಸುತ್ತಾರೆ.

**ಪಂಡಿತರು** : ಪ್ರಭು, ಈ ಬೊಂಬೆಗಳನ್ನು ಚಿನ್ನ ಮತ್ತು ನವರತ್ನಗಳಿಂದ ತಯಾರಿಸಲಾಗಿದೆ. ಇವುಗಳಿಗೆ ಎರಡು ಸಾವಿರ ವರಹ ನೀಡಬಹುದು.

ದಿನಾಂಕ : ..........................................                ಶಿಕ್ಷಕರ ಸಹಿ

©KTBS Not to be republished

# 5. ಚಿನ್ನದ ಬೊಂಬೆಗಳು



**ಬೊಂಬೆ ತಯಾರಕ** : ಪ್ರಭು, ಈ ಬೆಲೆ ಬಹಳ ಕಡಿಮೆಯಾಯಿತು.

**ರಾಜ** : ಹಾಗಾದರೆ ನೀನು ಬಯಸುವ ಬೆಲೆ ಎಷ್ಟು ?

**ಬೊಂಬೆ ತಯಾರಕ** : ಮೊದಲನೆ ಬೊಂಬೆಗೆ ಒಂದು ಕಾಸು, ಎರಡನೆಯದಕ್ಕೆ ಸಾವಿರ ವರಹ, ಮೂರನೆಯದಕ್ಕೆ ಬೆಲೆ ಕಟ್ಟಲು ಕಷ್ಟ, ಆದರೂ ನೂರು ಸಾವಿರ ವರಹ ಕೊಡಿ ಸಾಕು.

**ರಾಜ** : ಸ್ವಲ್ಪ ವಿಶೇಷತೆ ಇರುವ ಬೊಂಬೆ ಎಂದರೆ ಇಷ್ಟೊಂದು ಬೆಲೆಯೆ? ಇದು ದುರಾಸೆಯಾಯಿತು.

**ಕಾಳಿದಾಸ** : ಪ್ರಭುಗಳು ಮನ್ನಿಸಬೇಕು. ಈ ಬೊಂಬೆಗಳಿಗೆ ಬಳಸಿದ ಚಿನ್ನ, ನವರತ್ನಗಳಿಗೆ ಇಲ್ಲಿ ಬೆಲೆಯಿಲ್ಲ. ಇದರ ವಿಶಿಷ್ಟತೆಗೆ ಬೆಲೆ. ದಯವಿಟ್ಟು ರಾಜಸಭೆ ಅದನ್ನು ಅರ್ಥ ಮಾಡಿಕೊಂಡು ಬೆಲೆಯನ್ನು ನಿರ್ಧರಿಸಬೇಕು.

**ರಾಜ** : ಅದೇನು ?

**ಕಾಳಿದಾಸ** : ಪ್ರಭು, ಮೊದಲ ಬೊಂಬೆಯು ಗುರು ಹಿರಿಯರು ಹೇಳಿದ ಜ್ಞಾನದ ಮಾತುಗಳನ್ನು ಕೇಳಿ ಮತ್ತೊಂದು ಕಿವಿಯಲ್ಲಿ ಬಿಡುವ ಜನರಿದ್ದಂತೆ. ಇಂಥ ಜನರಿಗೆ ಒಂದು ಕಾಸಿನ ಬೆಲೆ . .

**ರಾಜ** : ಸೊಗಸಾಗಿದೆ ! ಎರಡನೆಯದು ?

**ಕಾಳಿದಾಸ** : ಕಿವಿಯಿಂದ ಕೇಳಿದ ಮಾತನ್ನು ಇತರರಿಗೆ ಹೇಳುವವರು ಮೊದಲಿನವರಿಗಿಂತ ಉತ್ತಮರೆಂಬುದನ್ನು ಸೂಚಿಸುತ್ತದೆ !

**ರಾಜ** : ಸ್ವಾರಸ್ಯಕರವಾಗಿದೆ ! ನಂತರ................ ?

**ಕಾಳಿದಾಸ** : ಮೂರನೆಯ ಬೊಂಬೆ ತಾನು ಕೇಳಿದ್ದನ್ನು ತಲೆಯಲ್ಲಿ ಇಟ್ಟುಕೊಂಡು ಅದರಂತೆ ನಡೆಯುವವರನ್ನು ಸೂಚಿಸುತ್ತದೆ. ಇಂಥವರಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ.

**ರಾಜ** : ಭಲೇ ! ಕಾಳಿದಾಸ, ಬಹಳ ಚೆನ್ನಾಗಿ ಅರ್ಥಮಾಡಿಸಿದೆ.

**ಕಾಳಿದಾಸ** : ಈ ಬೊಂಬೆ ತಯಾರಕ ಸಾಮಾನ್ಯ ಶಿಲ್ಪಿಯಲ್ಲ. ಅವನು ಕೇಳಿದ ಹಣ ನೀಡಿ ಸನ್ಮಾನಿಸೋಣ.

**ಬೊಂಬೆ ತಯಾರಕ** : ಧನ್ಯನಾದೆ ಪ್ರಭುಗಳೇ, ಮಹಾಕವಿ ಕಾಳಿದಾಸರ ವಿದ್ವತ್ತಿನ ಮುಂದೆ ನಾನು ಸೋತೆ. ನನಗೆ ಹಣ ಬೇಡ. ತಮ್ಮ ರಾಜ್ಯದಲ್ಲಿ ಮೂರನೇ ಬೊಂಬೆಯಂಥ ಜನ ಹೆಚ್ಚಾದರೆ ಅದೇ ನನಗೆ ಸನ್ಮಾನ.

ದಿನಾಂಕ : .........................................                ಶಿಕ್ಷಕರ ಸಹಿ

©KTBS Not to be republished

# 5. ಚಿನ್ನದ ಬೊಂಬೆಗಳು



**ಹೊಸ ಪದಗಳ ಅರ್ಥ :**

ವೈಶಿಷ್ಟ್ಯ – ವಿಶೇಷ ಗುಣ

ಜ್ಞಾನ – ತಿಳುವಳಿಕೆ

ವಿದ್ವತ್ತು – ಪಾಂಡಿತ್ಯ

ಪರಿಶ್ರಮ – ಹೆಚ್ಚಿನ ಶ್ರಮ

ಸಾರ್ಥಕ – ಪ್ರಯೋಜನ, ಫಲಕಾರಿ

ದುರಾಸೆ – ಅತಿ ಆಸೆ

**ಗಮನಿಸಿ – ತಿಳಿ**

ಕಾಳಿದಾಸ : ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದೆ ಇದ್ದ ಪ್ರಸಿದ್ಧ ಸಂಸ್ಕೃತ ಕವಿ, ನಾಟಕಕಾರ.

ಕಾಸು : ಹಿಂದಿನ ಕಾಲದಲ್ಲಿದ್ದ ತಾಮ್ರದ ನಾಣ್ಯ.

ವರಹ : ವರಾಹ ಮುದ್ರೆಯಿಂದ ಕೂಡಿದ ಒಂದು ನಾಣ್ಯ.

ಶಿಲ್ಪಿ : ಲೋಹ, ಶಿಲೆ, ಮರಗಳನ್ನು ಮೂರ್ತಿ ರೂಪದಲ್ಲಿ ಕೆತ್ತುವ ಕಲಾವಿದ.

ನವರತ್ನಗಳು : ವಜ್ರ, ಮಾಣಿಕ್ಯ, ಮರಕತ, ಪುಷ್ಯರಾಗ, ನೀಲ, ಗೋಮೇಧಿಕ, ವೈಡೂರ್ಯ, ಮುತ್ತು, ಹವಳ ಎಂಬ ಒಂಬತ್ತು ಬಗೆಯ ರತ್ನಗಳು.

ದಿನಾಂಕ........................ ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ



ಅ) 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿರುವ ಅರ್ಥಗಳನ್ನು ಹೊಂದಿಸಿ ಗೆರೆಯ ಮೇಲೆ ಬರೆ.

| 'ಅ' ಪಟ್ಟಿ | 'ಬ' ಪಟ್ಟಿ | |
|---|---|---|
| 1. ಜ್ಞಾನ | ಪ್ರಯೋಜನ | ________________ |
| 2. ವೈಶಿಷ್ಟ್ಯ | ಕಡಿಮೆ ಶ್ರಮ | ________________ |
| 3. ಸಾರ್ಥಕ | ಪಾಂಡಿತ್ಯ | ________________ |
| 4. ಪರಿಶ್ರಮ | ಅತಿ ಆಸೆ | ________________ |
| 5. ದುರಾಸೆ | ತಿಳುವಳಿಕೆ | ________________ |
| 6. ವಿದ್ವತ್ತು | ವಿಶೇಷ ಗುಣ | ________________ |
| | ಹೆಚ್ಚಿನ ಶ್ರಮ | |

©KTBS Not to be republished

ಆ) ಆವರಣದಲ್ಲಿನ ಸೂಕ್ತ ಪದ ಆರಿಸಿ, ಬಿಟ್ಟ ಸ್ಥಳದಲ್ಲಿ ಬರೆ.

(ರಾಜಸಭೆ, ಬಾಯಿ, ವಿದ್ವತ್ತಿನ, ಬೊಂಬೆ ತಯಾರಕ)

1. ಆಸ್ಥಾನಕ್ಕೆ ________________ ಬಂದನು.
2. ಎರಡನೆಯ ಬೊಂಬೆಯ ಕಿವಿಯಲ್ಲಿ ಹಾಕಿದ ದಾರ ________________ ಮೂಲಕ ಹೊರಗೆ ಬರುತ್ತದೆ.
3. ದಯವಿಟ್ಟು ________________ ಇದನ್ನು ಅರ್ಥ ಮಾಡಿಕೊಳ್ಳಬೇಕು.
4. ಮಹಾಕವಿ ಕಾಳಿದಾಸರ ________________ಮುಂದೆ ನಾನು ಸೋತೆ.

ದಿನಾಂಕ........................ ಶಿಕ್ಷಕರ ಸಹಿ

5 3

# ಪ್ರಶ್ನೋತ್ತರ



**ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.**

ಮಾದರಿ :

ಗೊಂಬೆ : ಜಾತ್ರೆಯಲ್ಲಿ ಗೊಂಬೆಗಳನ್ನು ಮಾರುತ್ತಾರೆ.

1. ಜ್ಞಾನ :
2. ವಿಶೇಷ :
3. ಪರಿಶ್ರಮ :
4. ಪ್ರಯೋಜನ :
5. ದುರಾಸೆ :

**ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.**

1. ಬೊಂಬೆ ತಯಾರಕನು ಎಷ್ಟು ಬೊಂಬೆಗಳನ್ನು ತಂದಿದ್ದನು ?

2. ಬೊಂಬೆಗಳನ್ನು ಯಾವುದರಿಂದ ತಯಾರಿಸಲಾಗಿದೆ ?

3. ಮೊದಲ ಬೊಂಬೆಯ ಬೆಲೆ ಎಷ್ಟು ?

4. ಮೂರನೇ ಬೊಂಬೆಯ ಕಿವಿಯಲ್ಲಿ ಹಾಕಿದ ದಾರ ಏನಾಗುತ್ತದೆ ?

5. ಬೊಂಬೆಗಳಲ್ಲಿರುವ ನೀತಿಯನ್ನು ರಾಜಸಭೆಗೆ ಅರ್ಥೈಸಿದವರು ಯಾರು ?

ದಿನಾಂಕ........................ ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



ಇ) ಹಿಂದು ಮುಂದಾದ ಪದಗಳನ್ನು ಅರ್ಥಪೂರ್ಣವಾಗಿ ಜೋಡಿಸಿ ವಾಕ್ಯದಲ್ಲಿ ಬರೆ.

1. ಬೊಂಬೆಗಳು / ಶಹಭಾಷ್ / ನಿನ್ನ/ ವಿಚಿತ್ರವಾಗಿವೆ.

2. ತಯಾರಕ/ ಸಾಮಾನ್ಯ/ ಶಿಲ್ಪಿಯಲ್ಲ/ ಈ ಬೊಂಬೆ

3. ವಿದ್ವತ್ತಿನ ಮುಂದೆ/ ಮಹಾಕವಿ ಕಾಳಿದಾಸರ/ ನಾನು ಸೋತೆ

4. ಕಿವಿಯಲ್ಲಿ/ ಈ ಬೊಂಬೆಯ/ ಹಾಕುತ್ತೇನೆ/ ದಾರ

ಈ) ಈ ಮಾತನ್ನು ಯಾರು ಯಾರಿಗೆ ಹೇಳಿದರು ?

1. "ಮಹಾರಾಜ, ಈ ಬೊಂಬೆಗಳನ್ನು ತಾವು ಕೊಂಡು ನನ್ನನ್ನು ಕಾಪಾಡಬೇಕು"

2. "ಬೊಂಬೆಗಳು ಚೆನ್ನಾಗಿವೆ, ಇವುಗಳ ಬೆಲೆ ಎಷ್ಟು ?"

3. "ದಯವಿಟ್ಟು ರಾಜಸಭೆ ಇದನ್ನು ಅರ್ಥಮಾಡಿಕೊಳ್ಳಬೇಕು"

ಉ) ಈ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆ.

1. ಮೂರು ಬೊಂಬೆಗಳ ವೈಶಿಷ್ಟ್ಯವೇನು ?

2. ಕಾಳಿದಾಸ ಗೊಂಬೆಗಳ ಮೂಲಕ ರಾಜ ಸಭೆಗೆ ತಿಳಿಸಿದ ವಿಷಯವೇನು?

3. ಮೂರು ಬೊಂಬೆಗಳಲ್ಲಿ ನಿನಗೆ ಇಷ್ಟವಾದ ಬೊಂಬೆ ಯಾವುದು ? ಏಕೆ ?

ದಿನಾಂಕ........................ ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ



**ಅ) ಗುಂಪಿಗೆ ಸೇರದ ಪದವನ್ನು ಆಯ್ದು ಆವರಣದಲ್ಲಿ ಬರೆ.**

1. ಸುರರು, ವಿದ್ವಾಂಸರು, ಪಂಡಿತರು, ಜ್ಞಾನಿಗಳು ( )
2. ಅರಿವು, ತಿಳಿವಳಿಕೆ, ಸುಖ, ಜ್ಞಾನ ( )
3. ಕಾಪಾಡು, ರಕ್ಷಿಸು, ಉಳಿಸು, ಮುಗಿಸು ( )
4. ಕಾಸು, ನಾಣ್ಯ, ನೋಟು, ವರಹ ( )

**ಆ) ಸುಳಿವು ಕೊಡದಿಂದ ಸೂಕ್ತ ಪದಗಳನ್ನು ಆಯ್ದು ಕೊಟ್ಟಿರುವ ನಾಣ್ನುಡಿಗಳನ್ನು ಪೂರ್ಣಗೊಳಿಸು.**

1. ಆಳಾಗಿ ದುಡಿ ________ ________
2. ಶಕ್ತಿಗಿಂತ ________ ________
3. ಕಷ್ಟಪಟ್ಟರೆ ________ ________
4. ಕೈ ಕೆಸರಾದರೆ ________ ________
5. ಅತಿ ಆಸೆ ________ ________
6. ಮಾತು ಬೆಳ್ಳಿ ________ ________
7. ವಿದ್ಯೆಗೆ ________ ________

**ಸುಳಿವು ಪದಗಳು :**

ಭೂಷಣ
ಅರಸಾಗಿ, ಯುಕ್ತಿ
ಗೇಡು, ಗತಿ, ಉಂಟು,
ಬಾಯಿ, ಮೌನ
ಸುಖ, ಬಂಗಾರ,
ಮೇಲು, ವಿನಯವೇ
ಉಣ್ಣು, ಮೊಸರು

ದಿನಾಂಕ........................ ಶಿಕ್ಷಕರ ಸಹಿ

©KTBS Not to be republished

ಇ) ಪ್ರತಿ ವೃತ್ತದಿಂದ ಒಂದೊಂದು ಸೂಕ್ತವಾದ ಪದ ಬಳಸಿ ಮಾದರಿಯಂತೆ ಅರ್ಥಪೂರ್ಣ ವಾಕ್ಯ ರಚಿಸಿ ಬರೆ.

| | | |
|---|---|---|
| ರಾಜ<br>ರಾಣಿ<br>ಅವನು<br>ಅವರು<br>ಅಣ್ಣಂದಿರು<br>ಅಕ್ಕಂದಿರು | ಪಕ್ಷಿಗಳನ್ನು<br>ಸೈನಿಕನನ್ನು<br>ಪುಸ್ತಕಗಳನ್ನು<br>ಚಿತ್ರವನ್ನು<br>ಮರಗಳನ್ನು | ನೋಡಿದನು<br>ನೋಡಿದಳು<br>ನೋಡಿದರು<br>ಓದಿದನು<br>ಓದಿದಳು<br>ಬರೆದನು<br>ಬರೆದಳು |

ಮಾದರಿ : ರಾಣಿ ಪಕ್ಷಿಗಳನ್ನು ನೋಡಿದಳು.

1. ______________________
2. ______________________
3. ______________________
4. ______________________
5. ______________________
6. ______________________
7. ______________________
8. ______________________
9. ______________________
10. ______________________

ದಿನಾಂಕ........................ ಶಿಕ್ಷಕರ ಸಹಿ


©KTBS Not to be republished

# ಓದಿ – ಉತ್ತರಿಸು
## ನರಿ ಮತ್ತು ಕೊಕ್ಕರೆ




ಸೂಚನೆ : ಈ ಚಿತ್ರ ಕಥೆಯಲ್ಲಿರುವ ಸಂಭಾಷಣೆಯನ್ನು ಓದಿ ಮುಂದಿನ ಪುಟದಲ್ಲಿರುವ ಪ್ರಶ್ನೆಗಳಿಗೆ ಉತ್ತರ ಬರೆ.


ನರಿ ಮತ್ತು ಕೊಕ್ಕರೆ ಸ್ನೇಹಿತರಾಗಿದ್ದರು. ಒಂದು ದಿನ ನರಿ ಕೊಕ್ಕರೆಯನ್ನು ಊಟಕ್ಕೆ ಕರೆಯಿತು.





ಕೊಕ್ಕರೆ ನರಿಯ ಮನೆಯ ಊಟಕ್ಕೆ ಬಂದಿತು. ನರಿಯು ತಟ್ಟೆಯಲ್ಲಿ ಪಾಯಸವನ್ನು ಕೊಕ್ಕರೆಗೆ ನೀಡಿತು.





ಛೇ! ನನಗೆ ಈ ನರಿ ಅವಮಾನದ ಜೊತೆ ಹಸಿವೆಯನ್ನು ಹೆಚ್ಚು ಮಾಡಿತು. ಇದಕ್ಕೆ ತಕ್ಕ ಬುದ್ಧಿ ಕಲಿಸಬೇಕು.





ಕೆಲವು ದಿನಗಳ ನಂತರ ಕೊಕ್ಕರೆ ನರಿಯನ್ನು ಊಟಕ್ಕೆ ಕರೆಯಿತು.




ನರಿಯು ಕೊಕ್ಕರೆಯ ಮನೆಯ ಊಟಕ್ಕೆ ಬಂದಾಗ ಕೊಕ್ಕರೆಯು ಉದ್ದನೆಯ ಬಾಯಿಯ ಹೂಜಿಗೆ ಪಾಯಸ ಹಾಕಿ ನರಿಗೆ ನೀಡಿತು.




ಕೊಕ್ಕರೆಯು ಸಂತೋಷದಿಂದ ಹೂಜಿಯಲ್ಲಿನ ಪಾಯಸವನ್ನು ಕುಡಿಯಿತು.




©KTBS Not to be republished

# ಓದಿ – ಉತ್ತರಿಸು
## ನರಿ ಮತ್ತು ಕೊಕ್ಕರೆ



* ಉತ್ತರಿಸು.

1. ಕೊಕ್ಕರೆ ಯಾರೊಂದಿಗೆ ಸ್ನೇಹ ಮಾಡಿತ್ತು ?

______________________________

2. ನರಿ ಕೊಕ್ಕರೆಗೆ ಯಾವುದರಲ್ಲಿ ಪಾಯಸ ನೀಡಿತು?

______________________________

3. ಹೂಜಿಯಲ್ಲಿರುವ ಪಾಯಸವನ್ನು ನರಿಗೆ ತಿನ್ನಲು ಸಾಧ್ಯವಾಯಿತೇ ? ಏಕೆ ?

______________________________

______________________________

4. ಈ ಕಥೆಯಲ್ಲಿರುವ ಪಾತ್ರಗಳು ಯಾವುವು ?

______________________________

5. ಯಾರ ನಡುವೆ ಸಂಭಾಷಣೆ ನಡೆಯಿತು?

______________________________

6. ಕೊಕ್ಕರೆ ನರಿಯೊಂದಿಗೆ ನಡೆದುಕೊಂಡ ರೀತಿ ಸರಿಯೇ? ಏಕೆ?

______________________________

______________________________

ದಿನಾಂಕ........................ ಶಿಕ್ಷಕರ ಸಹಿ

©KTBS Not to be republished

# ಓದು – ಪಟ್ಟಿ ಮಾಡು



ಸೂಚನೆ : ಸನ್ನಿವೇಶಗಳ ಸಂಭಾಷಣೆಯನ್ನು ಓದಿಕೊಂಡು ಮುಂದಿನ ಪುಟದಲ್ಲಿ ಕೇಳಲಾದ ಮಾಹಿತಿ ಭರ್ತಿಮಾಡು.

## ಸನ್ನಿವೇಶ – 1

(ಶಿಕ್ಷಕಿಯು ಮಕ್ಕಳನ್ನು ಹೊರಸಂಚಾರಕ್ಕೆ ಕರೆದುಕೊಂಡು ಹೋಗಿದ್ದಾರೆ. ಮಕ್ಕಳು ತೋಟದಲ್ಲಿರುವ ಗಿಡಮರಗಳನ್ನು ನೋಡುತ್ತಾ)

ಸುಮ : ಪೀಟರ್, ಈ ತೋಟದಲ್ಲಿ ಎಷ್ಟೊಂದು ತೆಂಗಿನ ಮರಗಳಿವೆ ನೋಡು.

ಪೀಟರ್ : ಹೌದು, ತೆಂಗಿನ ಮರಗಳು ಬಹಳ ಇವೆ. ಇವು ಜನರಿಗೆ ತುಂಬಾ ಉಪಯುಕ್ತ.

ಸುಮ : ತೆಂಗಿನ ಮರಕ್ಕೆ ಇನ್ನೊಂದು ಹೆಸರಿದೆ ಗೊತ್ತೆ ?

ಪೀಟರ್ : ಗೊತ್ತಿಲ್ಲ.

ರಹೀಮ್ : ತೆಂಗಿನ ಮರಕ್ಕೆ 'ಕಲ್ಪವೃಕ್ಷ' ಎಂದು ಕರೆಯುತ್ತಾರೆ.

ಸುಮ : ಪೀಟರ್, ರಹೀಮ್ ಗುರುಗಳು ಕರೆಯುತ್ತಿದ್ದಾರೆ ಬನ್ನಿ.

ರಹೀಮ್ : ಬಾರೋ, ಹೋಗೋಣ (ಹೋಗುವರು)

## ಸನ್ನಿವೇಶ – 2

(ಮಕ್ಕಳು ತಾತನೊಂದಿಗೆ ಪ್ರಾಣಿ ಸಂಗ್ರಹಾಲಯಕ್ಕೆ ಬಂದಿದ್ದಾರೆ. ಅಲ್ಲಿರುವ ವಿವಿಧ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ನೋಡುತ್ತಾ ಮುಂದೆ ಸಾಗುತ್ತಿದ್ದಾರೆ)

ನಿತಿನ್ : ತಾತ ಅಲ್ಲಿರುವ ಪಕ್ಷಿ ಯಾವುದು ?

ತಾತ : ಅದು ನವಿಲು.

ಸುಮ : ಅದು ಎಷ್ಟೊಂದು ಸುಂದರವಾಗಿದೆ ಅಲ್ಲವೇ ?

ತಾತ : ಹೌದು, ಅದು ಕೆಲವು ಸಲ ತನ್ನ ಸುಂದರವಾದ ಗರಿಗಳನ್ನು ಬಿಚ್ಚಿ ನರ್ತನ ಮಾಡುತ್ತದೆ.

ಸುಮ : ಅದಕ್ಕೆ ಅಲ್ಲವೆ ನವಿಲನ್ನು 'ನಾಟ್ಯ ಮಯೂರಿ' ಎಂದು ಕರೆಯುತ್ತಾರೆ.

ತಾತ : ಅಷ್ಟೇ ಅಲ್ಲ, ನವಿಲು ನಮ್ಮ ರಾಷ್ಟ್ರ ಪಕ್ಷಿಯೂ ಹೌದು.

ನಿತಿನ್ : ತಾತ, ನನಗೆ ಹಸಿವಾಗುತ್ತಿದೆ. ಊಟ ಮಾಡೋಣ ಬಾ.

ತಾತ : ಓಹೋ, ಆಗಲೆ ಮಧ್ಯಾಹ್ನವಾಯಿತೇ ! ನಡೆಯಿರಿ, ಆ ಮರದ ಬಳಿ ಕುಳಿತು ಊಟ ಮಾಡೋಣ.

©KTBS Not to be republished

5 4

# ಓದು – ಪಟ್ಟಿ ಮಾಡು

72

ಅ) ಎರಡೂ ಸನ್ನಿವೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ಕೆಳಗಿನ ಪಟ್ಟಿಯಲ್ಲಿ ತುಂಬು.

| ಕ್ರ. ಸಂ. | ವಿವರ | ಸನ್ನಿವೇಶ – 1 | ಸನ್ನಿವೇಶ – 2 |
|---|---|---|---|
| 1. | ಸಂಭಾಷಣೆ ನಡೆದ ಸ್ಥಳ | | |
| 2. | ಸಂಭಾಷಣೆ ನಡೆದ ವಿಷಯ | | |
| 3. | ಸಂಭಾಷಣೆಯಲ್ಲಿ ಭಾಗವಹಿಸಿದವರ ಸಂಖ್ಯೆ | | |
| 4. | ಸಂಭಾಷಣೆಯಲ್ಲಿ ಭಾಗವಹಿಸಿದವರ ಹೆಸರು. | 1.<br>2.<br>3. | 1.<br>2.<br>3. |

ಆ) ಈ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆ.

1. ನವಿಲನ್ನು ನಾಟ್ಯ ಮಯೂರಿ ಎಂದು ಏಕೆ ಕರೆಯುತ್ತಾರೆ ?

______________________________

______________________________

2. ತೆಂಗಿನ ಮರದ ಉಪಯೋಗಗಳನ್ನು ಬರೆ.

______________________________

______________________________

ದಿನಾಂಕ........................ ಶಿಕ್ಷಕರ ಸಹಿ

©KTBS Not to be republished

# 6. ಶಾಲಾ ಪಾಕ್ಷಿಕ ಪತ್ರಿಕೆ



ಅಂದು ಸೋಮವಾರ. ಪ್ರಾರ್ಥನಾ ಸಮಯದಲ್ಲಿ ಮುಖ್ಯ ಗುರುಗಳು "ಮಕ್ಕಳೇ, ಮೂರನೇ ತರಗತಿಯ ರಮೇಶ ಒಂದು ಚಿತ್ರ ಬರೆದುಕೊಂಡು ಬಂದಿದ್ದಾನೆ. ಎಷ್ಟು ಚೆನ್ನಾಗಿ ಬರೆದಿದ್ದಾನೆ ನೋಡಿರಿ" ಎಂದು ತೋರಿಸಿದರು. ಮಕ್ಕಳೆಲ್ಲರೂ ಖುಷಿಯಿಂದ "ತುಂಬಾ ಚೆನ್ನಾಗಿದೆ ಸರ್" ಎಂದರು. ಆಗ ಕಾವ್ಯ "ಗುರುಗಳೇ, ಮೊನ್ನೆ ದಿನ ವಿನುತಾ ಒಂದು ಕಥೆ ಹೇಳಿದ್ದಳು. ಅವಳು ಹೇಳಿದ್ದನ್ನು ನಾನು ಬರೆದುಕೊಂಡು ಬಂದಿದ್ದೀನಿ ನೋಡಿ ಸರ್" ಎಂದಳು. ಆಗ ಮುಖ್ಯಗುರುಗಳು "ಶಹಬ್ಬಾಷ್ ಚೆನ್ನಾಗಿದೆ. ಮಕ್ಕಳೇ ಕೇಳಿ, ಶಾಲಾ ಮಂತ್ರಿ ಮಂಡಲದಲ್ಲಿ ನಿರ್ಧರಿಸಿದಂತೆ ಈ ಸಲದ ನಮ್ಮ ಪಾಕ್ಷಿಕ ಪತ್ರಿಕೆಯಲ್ಲಿ ಲೇಖನಗಳನ್ನು ಪ್ರಕಟಿಸೋಣ. ಮತ್ತೆ ಯಾರಾದರೂ ಲೇಖನಗಳನ್ನು ಕೊಡುವುದಿದ್ದರೆ, ಮುಂದಿನ ಶನಿವಾರದೊಳಗೆ ಕೊಡಿರಿ" ಎಂದರು. ಆಗ ಫರೀದಾಳು "ಗುರುಗಳೇ ಚಿತ್ರ, ಕಥೆಗಳಲ್ಲದೆ, ಬೇರೆ ಯಾವ ವಿಷಯಗಳ ಬಗ್ಗೆ ಬರೆಯಬಹುದು?" ಎಂದು ಕೇಳಿದಳು.

ಮುಖ್ಯ ಗುರುಗಳು "ನಿಮಗೆ ತಿಳಿದಿರುವ ಸುಭಾಷಿತ, ಸ್ವರಚಿತ ಕವನ, ಚುಟುಕು, ನಗೆಹನಿ, ಪರಿಸರದ ಚಿತ್ರ, ವಿವಿಧ ಸ್ಥಳಗಳ ವಿಶೇಷತೆಗಳು, ವಿವಿಧ ಸಾಧನೆಗಳನ್ನು ಮಾಡಿದ ಮಹನೀಯರುಗಳ ಬಗ್ಗೆ ಲೇಖನ, ಗಾದೆ ಮಾತುಗಳು, ರೇಖಾ ಚಿತ್ರಗಳು ಮುಂತಾದವುಗಳನ್ನು ಬರೆಯಬಹುದು" ಎಂದರು.

ಮಕ್ಕಳೆಲ್ಲರೂ ಉತ್ಸಾಹದಿಂದ "ಆಯಿತು ಗುರುಗಳೇ" ಎಂದರು. ಎಲ್ಲರೂ ಶುಕ್ರವಾರದ ವೇಳೆಗೆ ತಾವು ಬರೆದುಕೊಂಡು ಬಂದ ಲೇಖನಗಳನ್ನು ನೀಡಿದರು. ಶಾಲಾ ಪಾಕ್ಷಿಕ ಪತ್ರಿಕೆಯ ಸಂಪಾದಕ ಮಂಡಳಿಯವರು ಅವುಗಳನ್ನು ಪರಿಶೀಲಿಸಿದರು.

ಉತ್ತಮವಾದ ಲೇಖನಗಳನ್ನು ಆಯ್ದು ಸೊಗಸಾದ ಶಾಲಾ ಪಾಕ್ಷಿಕ ಪತ್ರಿಕೆಯನ್ನು ಸಿದ್ದಪಡಿಸಿ ಪ್ರಕಟಿಸಿದರು.


ಅಂದು ಶನಿವಾರ, ವಿನುತ ಪತ್ರಿಕೆಯನ್ನು ನೋಡಿದಳು. ಕುತೂಹಲದಿಂದ ಓದಲು ಮುಂದಾದಳು. ಕೆಲವು ಲೇಖನಗಳನ್ನು ಸರಾಗವಾಗಿ ಓದಿದಳು. ಆದರೆ ಕೆಲವು ಲೇಖನಗಳನ್ನು ಓದಲು ಕಷ್ಟಪಟ್ಟಳು. ಏಕಿರಬಹುದು ಹೇಳಬಲ್ಲಿರಾ?...... ಹಾಗಿದ್ದರೆ ಮೊದಲಿಗೆ ಈ ಪತ್ರಿಕೆಯನ್ನು ಓದಿ.

ದಿನಾಂಕ......................                ಶಿಕ್ಷಕರ ಸಹಿ

©KTBS Not to be republished

# 6. ಶಾಲಾ ಪಾಕ್ಷಿಕ ಪತ್ರಿಕೆ





ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರು ತಂತ್ರಜ್ಞಾರಿಕೆಯ ಯೋಜನೆಯ ಆಧಾರದ ಮೇಲೆ ಕಾವೇರಿ ನದಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿ ಕೃಷ್ಣರಾಜ ಸಾಗರ ಅಣೆಕಟ್ಟೆ ಕಟ್ಟಿದ್ದಾರೆ. ಇದರಿಂದ ಆ ಭಾಗದ ಲಕ್ಷಾಂತರ ರೈತರಿಗೆ ಬಹಳ ಅನುಕೂಲವಾಗಿದೆ.

- ಜೋಸೆಫ್ 4ನೇ ತರಗತಿ

ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಕವಿಗಳು
ಕುವೆಂಪು, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮಕಾರಂತ, ವಿ.ಕೃ.ಗೋಕಾಕ್, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ.

★ ಆಯಿಷಾ 4ನೇ ತರಗತಿ

ಸುಭಾಷಿತ

ನುಡಿಯಲು ಬಲ್ಲವರು ಮಾತಿರುವಾಗ ಕೆಟ್ಟ ಮಾತನ್ನು ಆಡುವುದೇಕೆ?

ಸಂಗ್ರಹ- ಕೇಶವ 3ನೇ ತರಗತಿ

ಒಗಟು ಬಿಡಿಸಿ

* ಗಿಡಗಿಡಕ್ಕೂ ಬುಡಬುಡಕೆ
* ಮಾಳಿಗೆ ಮ್ಯಾಲೆ ಮಂಡಲದ ಹಾವು ಮಲಗೈತೆ.
* ಹಿಡಿದರೆ ಹಿಡಿತುಂಬ ಬಿಟ್ಟರೆ ಮನೆ ತುಂಬ

(ಸಂಗ್ರಹ) ಕಾವ್ಯ 5ನೇ ತರಗತಿ.

ನಾಡ ಹಬ್ಬ

ನಮ್ಮ ನಾಡಹಬ್ಬ ದಸರ. ಇದನ್ನು ಶರನ್ನವರಾತ್ರಿ ಎಂದು ಕರೆಯುತ್ತಾರೆ. ಮೈಸೂರು ದಸರ ರಾಜ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿನ ಜಂಬೂ ಸವಾರಿ ಆಕರ್ಷಣೀಯ.

ಸುಹಾಸ್ 4ನೇ ತರಗತಿ.

ಕವನ

ಜೂರು ಜೂರು ಕಾಗದ
ಬಂತು ಬಂತು ಹಾರುತ
ಏಕೆ ಅಂತ ನೋಡುವಾಗ
ಕೈಯ ಬಾಗಿ ಎತ್ತುತ್ತಾ
ತೊಟ್ಟಿಗೆ ಹಾಕುತ್ತಾ
ಇಡುವೆ ಶಾಲೆ ಸ್ವಚ್ಛ ಶಾಶ್ವತ

★ ಷರೀಫ್ 5ನೇ ತರಗತಿ

ಗಾದೆ ಮಾತು

* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?
* ಕೈ ಕೆಸರಾದರೆ ಬಾಯಿ ಮೊಸರು.
* ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿಯಿಲ್ಲ.

ಮೇರಿ 4ನೇ ತರಗತಿ

★ಕಾರಂಜಿ★

ಪಾಕ್ಷಿಕ ಪತ್ರಿಕೆ

ಸಂಪಾದಕ ಮಂಡಳಿ

ಸ.ಹಿಂ.ಪ್ರಾ.ಶಾಲೆ ನವಿಲೂರು.

ವಿಶ್ವ ಪರಿಸರ ದಿನಾಚರಣೆ ಜೂನ್ 5ರಂದು ಆಚರಿಸುತ್ತೇವೆ.

ರತಿ 3ನೇ ತರಗತಿ.

59

©KTBS Not to be republished

ದಿನಾಂಕ........................ ಶಿಕ್ಷಕರ ಸಹಿ

# 6. ಶಾಲಾ ಪಾಕ್ಷಿಕ ಪತ್ರಿಕೆ



(ಎಲ್ಲರೂ ಪತ್ರಿಕೆಯನ್ನು ಓದಿದರು)

ಶಿಕ್ಷಕಿ : "ಮಕ್ಕಳೇ, ನೀವೆಲ್ಲ ಈವರೆಗೆ ಪತ್ರಿಕೆಯನ್ನು ಓದಿದ್ದೀರಿಯಲ್ಲವೇ?"

ಮಕ್ಕಳು : (ಒಟ್ಟಾಗಿ) "ಹೌದು ಮೇಡಂ".

ಶಿಕ್ಷಕಿ : "ವಿನುತ, ನೀನು ಕೆಲವು ಲೇಖನಗಳನ್ನು ಓದಲು ಕಷ್ಟಪಟ್ಟೆ ಏಕೆ ?"

ವಿನುತ : "ಕೆಲವರ ಕೈ ಬರೆಹ ಚೆನ್ನಾಗಿರಲಿಲ್ಲ. ಆದ್ದರಿಂದ ಓದಲು ಕಷ್ಟವಾಯಿತು ಮೇಡಂ".

ಶಿಕ್ಷಕಿ : "ಚೆನ್ನಾಗಿರಲಿಲ್ಲ ಅಂದರೆ ಏನು?"

ವಿನುತ : ಕೆಲವರ ಕೈಬರೆಹ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಬರೆದಿರುವ ಅಕ್ಷರಗಳು ಮುದ್ರಿತ ಅಕ್ಷರಗಳ ಆಕಾರದಲ್ಲಿರಲಿಲ್ಲ. ಕೆಲವರು ಪದ ಮತ್ತು ಸಾಲುಗಳ ನಡುವೆ ಸ್ಥಳವನ್ನೇ ಬಿಟ್ಟಿರಲಿಲ್ಲ".

ಶಿಕ್ಷಕಿ : "ಹೌದು, ನೀನು ಹೇಳಿದ್ದು ಸರಿ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸ್ಪಷ್ಟವಾಗಿ ಬರೆಯಬೇಕು. ಆಗ ಮಾತ್ರ ನಾವು ಬರೆದದ್ದನ್ನು ಇತರರು ಸರಾಗವಾಗಿ ಓದಲು ಹಾಗೂ ಓದಿದ್ದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ" ಎಂದರು. ವಿದ್ಯಾರ್ಥಿಗಳು ಬರೆಯುವ ಕ್ರಮವನ್ನು ತಿಳಿದುಕೊಂಡರು.

### ಹೊಸ ಪದಗಳ ಅರ್ಥ

- ಪ್ರಾರ್ಥನೆ – ದೇವತಾ ಸ್ತುತಿ, ಬಿನ್ನಹ
- ಸ್ವರಚಿತ – ತಾನೇ ಬರೆದಿರುವ
- ಆಯ್ದ – ಆರಿಸಿದ
- ಸೊಗಸು – ಆಕರ್ಷಣೀಯ
- ವಸತಿ – ಮನೆ, ವಾಸಸ್ಥಳ
- ಲೇಖನ – ಬರೆಹ, ಬರವಣಿಗೆ

### ಗಮನಿಸಿ ತಿಳಿ

- ದೈನಿಕ – ಪ್ರತಿದಿನ
- ಸಾಪ್ತಾಹಿಕ – ಏಳು ದಿನಗಳಿಗೊಮ್ಮೆ
- ಪಾಕ್ಷಿಕ – ಹದಿನೈದು ದಿನಗಳಿಗೊಮ್ಮೆ
- ಮಾಸಿಕ – ತಿಂಗಳಿಗೊಮ್ಮೆ
- ತ್ರೈಮಾಸಿಕ – ಮೂರು ತಿಂಗಳಿಗೊಮ್ಮೆ
- ಅರ್ಧವಾರ್ಷಿಕ – ಆರು ತಿಂಗಳಿಗೊಮ್ಮೆ
- ವಾರ್ಷಿಕ – ಹನ್ನೆರಡು ತಿಂಗಳಿಗೊಮ್ಮೆ

ದಿನಾಂಕ......................    ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ



## ಅ) ಈ ಪದಗಳಿಗೆ ಅರ್ಥ ಬರೆ.

ಮಾದರಿ : ಸೊಗಸು – ಸುಂದರ

ಆಯ್ದ – ________________

ಲೇಖನ – ________________

ವಸತಿ – ________________

ಪಾಕ್ಷಿಕ – ________________

ಸ್ವರಚಿತ – ________________

## ಆ) ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬು.

1. ದಸರೆಯ ಮುಖ್ಯ ಆಕರ್ಷಣೆ ________________
2. ಕೃಷ್ಣರಾಜಸಾಗರ ಅಣೆಕಟ್ಟನ್ನು ________________ ನದಿಗೆ ಕಟ್ಟಿದ್ದಾರೆ.
3. ವಿಶ್ವ ಪರಿಸರ ದಿನಾಚರಣೆಯನ್ನು ________________ ರಂದು ಆಚರಿಸುತ್ತಾರೆ.
4. ನಾಡಹಬ್ಬದ ಬಗ್ಗೆ ಲೇಖನ ಬರೆದವರು ________________
5. ಶ್ರೀರಂಗ ಪಟ್ಟಣ ________________ ಜಿಲ್ಲೆಯಲ್ಲಿದೆ.
6. ಪ್ರತಿದಿನ ಪ್ರಕಟವಾಗುವ ಪತ್ರಿಕೆಯನ್ನು ________________ ಎಂದು ಕರೆಯುತ್ತಾರೆ.

ದಿನಾಂಕ :........................ ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



**ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.**

ಮಾದರಿ :

ಲೇಖನ : **ಪತ್ರಿಕೆಗೆ ಲೇಖನ ಬರೆಯುತ್ತೇನೆ.**

1. ಸಂಗ್ರಹ : ______
2. ಸ್ವಚ್ಛ : ______
3. ವಸತಿ : ______
4. ಸೊಗಸು : ______
5. ಪಾಕ್ಷಿಕ : ______

**ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.**

1. ಶಾಲೆಯ ಪಾಕ್ಷಿಕ ಪತ್ರಿಕೆಯ ಹೆಸರೇನು?

______

2. ಮೇರಿ ಪತ್ರಿಕೆಗೆ ಬರೆದ ಲೇಖನ ಯಾವುದು ?

______

3. ನಮ್ಮ ನಾಡ ಹಬ್ಬ ಯಾವುದು?

______

4. ಮಕ್ಕಳು ಬರೆದ ಲೇಖನಗಳನ್ನು ಯಾರು ಪರಿಶೀಲಿಸಿದರು?

______

5. ಒಗಟಿನ ಲೇಖನವನ್ನು ಬರೆದವರು ಯಾರು ?

______

6. ಕನ್ನಡದಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಎಷ್ಟು ಮಂದಿ ಪಡೆದಿದ್ದಾರೆ?

______

ದಿನಾಂಕ :........................ ಶಿಕ್ಷಕರ ಸಹಿ

©KTBS Not to be republished

**ಇ) ಈ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯದಲ್ಲಿ ಉತ್ತರ ಬರೆ.**

1. ಶಾಲೆಯ ಪಾಕ್ಷಿಕ ಪತ್ರಿಕೆಯಲ್ಲಿರುವ ಲೇಖನಗಳಾವುವು?

2. ನಿಮ್ಮ ಜಿಲ್ಲೆಯಲ್ಲಿರುವ ಪ್ರೇಕ್ಷಣೀಯ ಸ್ಥಳಗಳನ್ನು ಪಟ್ಟಿ ಮಾಡಿ.

3. 'ಕಾರಂಜಿ' ಪತ್ರಿಕೆಯಲ್ಲಿ ಯಾರ ಕೈ ಬರಹ ಇಷ್ಟವಾಯಿತು? ಏಕೆ?

ದಿನಾಂಕ :........................

ಶಿಕ್ಷಕರ ಸಹಿ

©KTBS Not to be republished

ಅ) ಪದಗಳನ್ನು ಬಳಸಿ ಅರ್ಥ ಪೂರ್ಣ ವಾಕ್ಯ ರಚಿಸಿ ಬರೆ.

| | | |
|---|---|---|
| ಕುವೆಂಪು | ದೀಪಗಳ | ಸುಂದರ |
| ಅನೇಕರು | ಭಾಷೆ | ಹಬ್ಬ |
| ನಮ್ಮ | ರೈತರಿಗೆ | ಬರೆದಳು |
| ಗೀತಾ | ನೋಡಲು | ಅನುಕೂಲ |
| ಅಣೆಕಟ್ಟಿನಿಂದ | ಕವನ | ಕಳೆದುಕೊಂಡರು |
| ದೀಪಾವಳಿ | ವಸತಿಗಳನ್ನು | ಬರೆದರು |
| ಜಲಪಾತ | ನಾಡಗೀತೆ | ಕನ್ನಡ |

ಮಾದರಿ : ಕುವೆಂಪು ನಾಡಗೀತೆ ಬರೆದರು.

1. ______

2. ______

3. ______

4. ______

5. ______


6. ______

ದಿನಾಂಕ :........................ ಶಿಕ್ಷಕರ ಸಹಿ

©KTBS Not to be republished

ಆ) ಕೊಟ್ಟಿರುವ ಚಿತ್ರದ ಸಹಾಯದಿಂದ ಪದಗೋಪುರವನ್ನು ಪೂರ್ಣಗೊಳಿಸು.

ಮಾದರಿ :






ಕೈ

©KTBS Not to be republished

ದಿನಾಂಕ :........................

ಶಿಕ್ಷಕರ ಸಹಿ

ಇ) ಮಾದರಿಯಂತೆ ಆವರಣದಲ್ಲಿ ಕೊಟ್ಟಿರುವ ಸೂಕ್ತವಾದ ಪದವನ್ನು ಆರಿಸಿ, ವಾಕ್ಯಗಳನ್ನು ಪೂರ್ಣಗೊಳಿಸು.

(ದುಂಡಾಯಿತು, ಚುರುಕಾಯಿತು, ಇಂಪಾಯಿತು, ಹೆಚ್ಚಾಯಿತು, ಬೆಣ್ಣೆಯಾಯಿತು, ಹಸಿರಾಯಿತು, ಹಳ್ಳವಾಯಿತು, ತಂಪಾಯಿತು)

ಮಾದರಿ : ಓದಿ ಓದಿ – ವಿಷಯ ಮನದಟ್ಟಾಯಿತು.

1. ಕೇಳಿ ಕೇಳಿ ಕಿವಿ ______________________

2. ನಕ್ಕು ನಕ್ಕು ಆರೋಗ್ಯ ______________________

3. ಹಾಡಿ ಹಾಡಿ ರಾಗ ______________________

4. ಬರೆದು ಬರೆದು ಅಕ್ಷರ ______________________

5. ಮಳೆ ಸುರಿದು ಸುರಿದು ಭೂಮಿ ______________________

6. ಮೊಸರು ಕಡೆದು ಕಡೆದು ______________________

7. ಗಾಳಿ ಬೀಸಿ ಬೀಸಿ ಧಗೆ ______________________

8. ಹನಿ ಹನಿ ಗೂಡಿ ______________________

©KTBS Not to be republished

ದಿನಾಂಕ : ..................................                ಶಿಕ್ಷಕರ ಸಹಿ

**ಅ) ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬರೆ.**

ಮಾದರಿ : ಅಮ್ಮ – ಅಪ್ಪ

1. ಹುಡುಗಿ – ________________ 4. ಗೆಳೆಯ – ________________

2. ಅಜ್ಜ – ________________ 5. ಶಿಕ್ಷಕಿ – ________________

3. ಅಕ್ಕ – ________________ 6. ತಮ್ಮ – ________________

**ಆ) ಮಾದರಿಯಲ್ಲಿ ನೀಡಿರುವ ವಾಕ್ಯಗಳನ್ನು ಗಮನವಿಟ್ಟು ಓದು. ಗೆರೆ ಎಳೆದಿರುವ ಪದಗಳಲ್ಲಿ ಆಗಿರುವ ವ್ಯತ್ಯಾಸಗಳನ್ನು ಗಮನಿಸು. ಅದರಂತೆ ಕೃಷ್ಣ, ಫಾತೀಮಾ ಹೆಸರನ್ನು ಬಳಸಿ ವಾಕ್ಯಗಳನ್ನು ರಚಿಸಿ ಬರೆ.**

**ಮಾದರಿ :**
1. ರಾಜು ತಿಂಡಿ ತಿನ್ನುವನು.
2. ರಾಜು ತಿಂಡಿ ತಿಂದನು.
3. ರಾಜು ತಿಂಡಿ ತಿನ್ನುತ್ತಾನೆ.

1. ಕೃಷ್ಣ :
   1. ________________________________
   2. ________________________________
   3. ________________________________

2. ಫಾತೀಮಾ :
   1. ________________________________
   2. ________________________________
   3. ________________________________

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

## ರಜಾಪತ್ರ

**ಸೂಚನೆ :**

**ಈ ರಜಾ ಪತ್ರವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸು.**

ಇಂದ

ಕಿರಣ
3 ನೇ ತರಗತಿ
ಸ. ಕಿ. ಪ್ರಾ. ಶಾಲೆ, ಕನಕಪುರ

ಇವರಿಗೆ

ತರಗತಿ ಉಪಾಧ್ಯಾಯರಿಗೆ,
3 ನೇ ತರಗತಿ
ಸ, ಕಿ, ಪ್ರಾ, ಶಾಲೆ, ಕನಕಪುರ

ಪೂಜ್ಯ ಗುರುಗಳಿಗೆ,

ವಿಷಯ : ಎರಡು ದಿನಗಳ ರಜೆಯನ್ನು ಕೋರಿ

ನಾನು ನನ್ನ ಚಿಕ್ಕಮ್ಮನ ಊರಿನಲ್ಲಿ ನಡೆಯುವ ಜಾತ್ರೆಗೆ ಹೋಗಬೇಕಿರುವುದರಿಂದ ದಿನಾಂಕ : 12.08.18 ರಿಂದ 13.08. 18 ರವರೆಗೆ ಎರಡು ದಿನಗಳ ರಜೆಯನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ದಿನಾಂಕ : 10.08.2017
ಸ್ಥಳ : ಕನಕಪುರ

ತಮ್ಮ ವಿಧೇಯ ವಿದ್ಯಾರ್ಥಿ
ಕಿರಣ್

ಪೋಷಕರ ಸಹಿ

**ಪ್ರಶ್ನೆಗಳಿಗೆ ಉತ್ತರಿಸು.**

1) ರಜಾ ಪತ್ರವನ್ನು ಯಾರು ಬರೆದಿದ್ದಾರೆ ?

______________________________

2) ಕಿರಣ ಎಷ್ಟು ದಿನಗಳಿಗೆ ರಜೆ ಕೋರಿದ್ದಾನೆ ?

______________________________

3) ಕಿರಣ ರಜೆ ಪಡೆಯಲು ಕಾರಣವೇನು?

______________________________

ದಿನಾಂಕ : .................................. ಶಿಕ್ಷಕರ ಸಹಿ

©KTBS Not to be republished

## ರಜಾಪತ್ರ

**ಅಕ್ಕನ ಮದುವೆಗೆ ಹೋಗುವುದಕ್ಕಾಗಿ ಮೂರು ದಿನಗಳ ರಜೆ ಕೋರಿ ನಿನ್ನ ತರಗತಿ ಉಪಾಧ್ಯಾಯರಿಗೆ ರಜಾ ಪತ್ರ ಬರೆ.**

ಇಂದ

______________________

______________________

______________________

ಇವರಿಗೆ

______________________

______________________

______________________

ಪೂಜ್ಯ ಗುರುಗಳಿಗೆ,

ವಿಷಯ : ______________________________________________

______________________________________________________________

______________________________________________________________

______________________________________________________________

______________________________________________________________

______________________________________________________

ದಿನಾಂಕ : ______________________ ______________________

ಸ್ಥಳ : ______________________ ______________________

______________________

ದಿನಾಂಕ : ................................... ಶಿಕ್ಷಕರ ಸಹಿ

©KTBS Not to be republished

6 4

# ವ್ಯತ್ಯಾಸ ಗುರುತಿಸು



ಅ) ಕೆಳಗೆ ಕೈ ಬರೆಹ ಹಾಗೂ ಮುದ್ರಣ ರೂಪದಲ್ಲಿ ವಾಕ್ಯಗಳನ್ನು ನೀಡಲಾಗಿದೆ. ಅವುಗಳನ್ನು ಗಮನವಿಟ್ಟು ಓದು. ವ್ಯತ್ಯಾಸವನ್ನು ಗಮನಿಸು. ನಂತರ ಕೆಳಗೆ ನಕಲು ಮಾಡು.
ಮುದ್ರಣಕ್ಕಿಂತ ಕೈಬರೆಹದಲ್ಲಿನ ವಾಕ್ಯಗಳಲ್ಲಿ ವ್ಯತ್ಯಾಸವಿರುವ ಅಕ್ಷರಗಳನ್ನು ಆರಿಸಿ, ಕೊನೆಯ ಸಾಲಿನಲ್ಲಿ ಬರೆ.

1. ರಾಗಿಣಿ ಪುಸ್ತಕ ಓದುತ್ತಿದ್ದಾಳೆ. — ರಾಗಿಣಿ ಪುಸ್ತಕ ಓದುತ್ತಿದ್ದಾಳೆ.

2. ಚಕ್ರವರ್ತಿಯು ಮಾರುವೇಷದಲ್ಲಿದ್ದನು. — ಚಕ್ರವರ್ತಿಯು ಮಾರುವೇಷದಲ್ಲಿದ್ದನು.

3. ವ್ಯಾಪಾರಿ ಹಣ್ಣು ತರಕಾರಿ ಮಾರಿದನು. — ವ್ಯಾಪಾರಿ ಹಣ್ಣು ತರಕಾರಿ ಮಾರಿದನು.

4. ಗಿಡ ಮರಗಳನ್ನು ಬೆಳೆಸಬೇಕು. — ಗಿಡ ಮರಗಳನ್ನು ಬೆಳೆಸಬೇಕು.

1. ______________________________

2. ______________________________

3. ______________________________

4. ______________________________

ವ್ಯತ್ಯಾಸವಿರುವ ಅಕ್ಷರಗಳು :

______________________________

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

# ಸೂಚನೆಯಂತೆ ಉತ್ತರಿಸು

ಅ) ಕೆಳಗೆ ನೀಡಿರುವ ಸ್ಥಳದಲ್ಲಿ ಸೂಚಿಸಿದವರಿಂದ ಅವರಿಗೆ ತಿಳಿದಿರುವ ಗಾದೆ / ಸೂಕ್ತಿ / ಸುಭಾಷಿತವನ್ನು ಅವರ ಕೈಯಿಂದಲೇ ಬರೆಸು.

1) ಗೆಳೆಯ / ಗೆಳತಿ : ____________________

2) ಸಹಪಾಠಿ : ____________________

3) ಅಣ್ಣ/ಅಕ್ಕ : ____________________

- ಮೇಲಿನ ಕೈ ಬರೆಹದಲ್ಲಿ ನಿನಗೆ ಯಾರ ಬರೆಹ ಇಷ್ಟವಾಯಿತು?

____________________

____________________

©KTBS Not to be republished

ಸೂಚನೆ :

- ಪ್ರತಿಯೊಬ್ಬರ ಕೈ ಬರೆಹವನ್ನು ಆಧರಿಸಿ ನೀಡಿರುವ ಹೇಳಿಕೆಗಳಿಗೆ ಚೌಕದಲ್ಲಿ ✓ ಅಥವಾ X ಗುರುತನ್ನು ಹಾಕು.

| | ಗೆಳೆಯ/ ಗೆಳತಿ | ಸಹಪಾಠಿ | ಅಣ್ಣ/ಅಕ್ಕ |
|---|---|---|---|
| 1. ಎಲ್ಲಾ ಅಕ್ಷರಗಳನ್ನು ಓದಬಹುದು. | ☐ | ☐ | ☐ |
| 2. ಎಲ್ಲಾ ಅಕ್ಷರಗಳು ಒಂದೇ ಗಾತ್ರದಲ್ಲಿವೆ. | ☐ | ☐ | ☐ |
| 3. ನೇರ ಸಾಲಿನಲ್ಲಿ ಬರೆದಿದೆ. | ☐ | ☐ | ☐ |

- ಮೇಲಿನ ✓ ಹಾಗೂ X ಗುರುತನ್ನು ಗಮನಿಸು, ಯಾರ ಕೈ ಬರೆಹವು ಹೆಚ್ಚು ✓ ಗುರುತನ್ನು ಹೊಂದಿದೆ ?

____________________

ದಿನಾಂಕ : ..................................  ಶಿಕ್ಷಕರ ಸಹಿ

**ಸೂಚನೆ :**

- ಮಾದರಿಯನ್ನು ಗಮನಿಸು.
- ಕೆಳಗಿನ ಪದಗಳನ್ನು ಅವುಗಳ ಮುಂದೆ ನೀಡಿರುವ ಆಕಾರಗಳಲ್ಲಿ ಗೆರೆಗಳು ತಾಗುವಂತೆ ಬರೆ.

**ಮಾದರಿ :**


1. ಪ್ರಕೃತಿ





2. ಉದ್ಯಾನವನ




3. ಸುಸ್ವಾಗತ



4. ಉಡುಗೊರೆ



5. ಕನ್ನಡ ರಾಜ್ಯೋತ್ಸವ




6. ನಿನ್ನ ಹೆಸರನ್ನು ನಿನಗಿಷ್ಟವಾದ ಆಕಾರದಲ್ಲಿ ಬರೆ.

ದಿನಾಂಕ : ..................................    ಶಿಕ್ಷಕರ ಸಹಿ

©KTBS Not to be republished

# 7. ಹರಿದ ಕಿಸೆ





ಒಂದಿನ ನಾನು ಪೇಟೆಗೆ ಹೋದೆನು
ಸಂತೆಯು ನೆರೆದಿತ್ತು ।
ಹೂವಿನ ಅಂಗಡಿ ಎದುರಿಗೆ ನಿಲ್ಲಲು
ವಾಸನೆ ಬರುತ್ತಿತ್ತು ।
ಘಮಘಮ ವಾಸನೆ ಬರುತ್ತಿತ್ತು ॥೧॥

ಬಣ್ಣವು ತಿರುಗಿದ ಮಾವಿನ ಹಣ್ಣಿನ
ರಾಶಿಯು ಬಿದ್ದಿತ್ತು ।
ಚೊಣ್ಣದ ಜೇಬಿಗೆ ಕೈಯನು ತುರುಕಿದೆ
ಝಣಝಣವೆನುತಿತ್ತು ।
ಬಾಯೊಳು ತನನನ ಹಾಡಿತ್ತು ॥೨॥



ನೋಡುತ ಮುಂದಕೆ ಹೋದೆನು ನಾನು
ಜಿಲೇಬಿ ನಗುತಿತ್ತು ।
ದಳೇದ ಉಂಡಿ ಗಡಾದ ಅಂಟು
ಮನವನು ಸೆಳೆದಿತ್ತು ।
ನನ್ನನು ನಿಲ್ಲಿಸಿ ಬಿಟ್ಟಿತ್ತು ॥೩॥

ಕರಿದವಲಕ್ಕಿ ಹುರಿದಾ ಕಡಲೆ
ಎಲ್ಲಾ ನೆರೆದಿತ್ತು ।
ಉಬ್ಬಿದ ಪೂರಿ ಬಿಸಿಬಿಸಿ ಬಾಜಿ
ಬಾಬಾ ಎನುತಿತ್ತು ।
ಬಾಯೊಳು ನೀರೇ ಸುರಿದಿತ್ತು ॥೪॥

ಮೆಲ್ಲನೆ ಜೇಬಿಗೆ ಕೈಯನು ಹಾಕಿದೆ
ಬೆರಳೇ ಹೊರಬಿತ್ತು ।
ಅಯ್ಯೋ, ಅಪ್ಪಾ ಎನ್ನುತ ನೋಡಿದೆ
ಎಲ್ಲವು ಬರಿದಿತ್ತು ।
ಹರಿದಿಹ ಕಿಸೆಯದು ನಗುತ್ತಿತ್ತು ॥೫॥

– ಶಂ. ಗು. ಬಿರಾದಾರ

**ಹೊಸ ಪದಗಳ ಅರ್ಥ**

| | | |
|---|---|---|
| ಕಿಸೆ | – | ಜೇಬು |
| ರಾಶಿ | – | ಗುಡ್ಡೆ, ಒಟ್ಟಿಗೆ ಸೇರಿಸುವುದು |
| ಪೇಟೆ | – | ಅಂಗಡಿಗಳ ಬೀದಿ |
| ಸೆಳೆ | – | ಆಕರ್ಷಿಸು |
| ಚೊಣ್ಣ | – | ಚಡ್ಡಿ |
| ನೆರೆದಿತ್ತು | – | ಸೇರಿತ್ತು |
| ಮನ | – | ಮನಸ್ಸು |

**ಗಮನಿಸಿ ತಿಳಿ :**

ದಳೇದ ಉಂಡಿ : ಒಂದು ರೀತಿಯ ಸಿಹಿ ತಿಂಡಿ

ಗಡಾದ ಅಂಟು : ಅಮೀನಗಡದ ಕರದಂಟು (ಸಿಹಿ ಪದಾರ್ಥ)

ಸಂತೆ : ವ್ಯಾಪಾರಕ್ಕಾಗಿ ವಸ್ತುಗಳನ್ನು ಮಾರಲು ಮತ್ತು ಕೊಂಡುಕೊಳ್ಳಲು ವಾರಕ್ಕೊಮ್ಮೆ ಸೇರುವ ಸ್ಥಳ

ದಿನಾಂಕ : ...................................   ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ

ಅ) ಕೆಳಗಿನ ಪದಗಳಿಗೆ ಅರ್ಥ ಬರೆ.

1. ಪೇಟೆ : ______
2. ರಾಶಿ : ______
3. ಸೆಳೆಯಿತು : ______
4. ಕಿಸೆ : ______
5. ನೆರೆದಿತ್ತು : ______

ಆ) ಹೊಂದಿಸಿ ಬರೆ.

| 'ಅ' ಪಟ್ಟಿ | 'ಬ' ಪಟ್ಟಿ | |
|---|---|---|
| 1. ಘಮಘಮ | ಹಾಡು | ______ |
| 2. ಬಿಸಿಬಿಸಿ | ಹಣ | ______ |
| 3. ಝಣಝಣ | ಬಾಜಿ | ______ |
| 4. ತನನನ | ಹೂವು | ______ |

ಇ) ಪದ್ಯ ಭಾಗವನ್ನು ಪೂರ್ಣಗೊಳಿಸು.

ಒಂದಿನ ನಾನು ______

______ ನೆರೆದಿತ್ತು ।

ಹೂವಿನ ______ ನಿಲ್ಲಲು

______ ಬರುತ್ತಿತ್ತು ।

______ ಬರುತ್ತಿತ್ತು ॥೧॥

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.

ಮಾದರಿ : ಕಿಸೆ : ನಾನು ಕಿಸೆಯಲ್ಲಿ ಹಣ ಇಡುತ್ತೇನೆ.

1. ವಾಸನೆ : ______
2. ಸೆಳೆ : ______
3. ಜೇಬು : ______
4. ರಾಶಿ : ______
5. ಪೇಟೆ : ______

ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಸಂತೆಯು ಎಲ್ಲಿ ನೆರೆದಿತ್ತು?

______

2. ಘಮಘಮ ವಾಸನೆ ಎಲ್ಲಿಂದ ಬರುತ್ತಿತ್ತು?

______

3. ನಿನಗೆ ಇಷ್ಟವಾಗುವ ತಿಂಡಿಗಳನ್ನು ಹೆಸರಿಸು.

______

4. ಕಿಸೆಯು ಹರಿಯದಿದ್ದರೆ ಏನಾಗುತ್ತಿತ್ತು?

______

5. ಯಾವ ಹಣ್ಣಿನ ರಾಶಿ ಬಿದ್ದಿತ್ತು?

______

6. ಯಾವ ತಿಂಡಿ ಮನವನ್ನು ಸೆಳೆದಿತ್ತು?

______

7. ಹಣ ಎಲ್ಲಿತ್ತು?

______

ದಿನಾಂಕ : .................................. ಶಿಕ್ಷಕರ ಸಹಿ

©KTBS Not to be republished

## ಅ) ಒಗಟುಗಳನ್ನು ಬಿಡಿಸಿ, ಸರಿಯಾದ ಉತ್ತರವನ್ನು ಚೌಕದಲ್ಲಿ ಬರೆ.

1. ಅಂಗೈ ಅಗಲ ಕೆರೆ, ಕೆರೆಯಲ್ಲಿ ನೀರು, ನೀರಿನಲ್ಲಿ ಬೇರು, ಬೇರಿಗೆ ಬೆಂಕಿ, ಹಾಗಾದರೆ ನಾನು ಯಾರು ?
2. ಮುಳ್ಳು ಮುಳ್ಳಿನ ಚಕ್ರ, ಗಾಡಿ ಇಲ್ಲದ ಚಕ್ರ, ಮುರಿದು ಮುರಿದು ತಿನ್ನುವ ಚಕ್ರ, ಹಾಗಾದರೆ ನಾನು ಯಾರು ?
3. ಸುತ್ತ ಮುತ್ತ ಸುಣ್ಣದ ಗೋಡೆ, ಎತ್ತ ನೋಡಿದರು ಬಾಗ್ಲಿಲ್ಲ ಹಾಗಾದರೆ ನಾನು ಯಾರು ?
4. ದೊಡ್ಡಣ್ಣನ ಹಿಂದೆ ಹತ್ತಾರು ತಮ್ಮಂದಿರು ಊರೆಲ್ಲಾ ಸುತ್ತುತ್ತಾರೆ. ಹಾಗಾದರೆ ನಾನು ಯಾರು ?
5. ಗಿರಗಿರ ತಿರುಗುತ್ತೇನೆ, ಸುಸ್ತಾಗಿ ಬೀಳುತ್ತೇನೆ. ಹಾಗಾದರೆ ನಾನು ಯಾರು ?

(ಉತ್ತರ : ಚಕ್ಕುಲಿ, ರೈಲು, ದೀಪ, ಬುಗುರಿ, ಮೊಟ್ಟೆ)

## ಆ) ಕೆಳಗಿನ ಮಾದರಿಯಂತೆ ಸಮಾನಾರ್ಥಕ ಪದ ಬಳ್ಳಿ ರಚಿಸು.

ಮಾದರಿ : ಹೂ → ಪುಷ್ಪ → ಕುಸುಮ → ಸುಮ

1. ಹಣ → ____ → ____ → ____
2. ನೀರು → ____ → ____ → ____
3. ಅರಣ್ಯ → ____ → ____ → ____
4. ಭೂಮಿ → ____ → ____ → ____

ದಿನಾಂಕ : ..................................        ಶಿಕ್ಷಕರ ಸಹಿ

©KTBS Not to be republished

7 4

# ಚಿತ್ರ ನೋಡಿ ಉತ್ತರಿಸು

**100**

ಸೂಚನೆ : ಚಿತ್ರದಲ್ಲಿ ನೀಡಲಾದ ಪ್ರತಿ ವಸ್ತುವಿನ ಕನಿಷ್ಠ ಎರಡು ಉಪಯೋಗ ಬರೆ.







ದಿನಾಂಕ : .................................. ಶಿಕ್ಷಕರ ಸಹಿ

©KTBS Not to be republished

7 4

# ಚಿತ್ರ ನೋಡಿ ಉತ್ತರಿಸು

101

ಸೂಚನೆ : ಈ ಕೆಳಗೆ ನೀಡಿರುವ ಹಳ್ಳಿ ಮತ್ತು ಪಟ್ಟಣದ ಚಿತ್ರಗಳನ್ನು ನೋಡಿ, ಮಾಹಿತಿಯನ್ನು ತುಂಬು.





ಅ) ಹಳ್ಳಿಯಲ್ಲಿ ಕಾಣುವ ವಸ್ತುಗಳು

____________________

____________________

____________________

____________________

____________________

ಅ) ಪಟ್ಟಣದಲ್ಲಿ ಕಾಣುವ ವಸ್ತುಗಳು

____________________

____________________

____________________

____________________

____________________

ಆ) ಎರಡರಲ್ಲೂ ಕಾಣುವ ಸಾಮಾನ್ಯ ವಸ್ತುಗಳು

________________________________________

________________________________________

________________________________________

ಇ) ಸಾಮಾನ್ಯ ವಸ್ತುಗಳಲ್ಲಿ ಯಾವುದಾದರೊಂದರ ಬಗ್ಗೆ ವಿವರಿಸು.

________________________________________

________________________________________

________________________________________

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

8 2-3

# 8. ಕೋಲಾಟ





ಕೋಲು ಕೋಲಣ್ಣ ಕೋಲೇ
ಕೋಲು ಕೋಲಣ್ಣ ಕೋಲೇ
ಕೋಲು ಕೋಲೇ
ತಾವರೆ ಕೆರೆ ಏರಿ
ಸುವ್ವಿ ಸುಂದರ ದಾರಿ..............
ನಮ್ಮೂರಿಗೊಂದು ಹರಿದಾರೀ, ನಮ್ಮೂರಿಗೊಂದು ಹರಿದಾರೀ............

ಈ ಕೋಲಾಟದ ಪದವನ್ನು ಕೇಳುತ್ತಿದ್ದರೆ ಮನಸ್ಸು ಉಲ್ಲಾಸಗೊಂಡು ಮೈಕುಣಿಯಲು ತವಕಿಸುತ್ತದೆ. ಕೋಲಾಟವು ಒಂದು ಜಾನಪದ ಕಲೆ ಹಾಗೂ ಮನರಂಜನೆಯ ಆಟವಾಗಿದೆ. ಕೋಲಾಟ ಆಡುವಾಗ ಕೋಲು ಹಾಕುವವರು ಹೆಜ್ಜೆ ಹಾಕುತ್ತಾ ಮಾಡುವ ಗೆಜ್ಜೆ ನಾದಕ್ಕೆ ತಲೆದೂಗದವರೆ ಇಲ್ಲ. ಕೋಲಾಟ ಆಡುತ್ತಾ ಗುಂಪಿನ ಎಲ್ಲರೂ ಒಂದೆಡೆ ಸೇರುವ ಮತ್ತು ತಿರುಗುವ ಪರಿ ನೋಡುಗರನ್ನು ಆಕರ್ಷಿಸುತ್ತದೆ. ಈಗಲೂ ಕೋಲಾಟ ಗ್ರಾಮೀಣ ಜನತೆಯ ಹೃದಯದಲ್ಲಿ ವಿಶೇಷ ಸ್ಥಾನ ಪಡೆದಿದೆ.

ಇದು ಗ್ರಾಮೀಣ ಸೊಗಡಿನಿಂದ ಕೂಡಿದ ಆಟವಾಗಿದೆ. ಗ್ರಾಮೀಣ ಉಡುಗೆ ತೊಡುಗೆಗಳು ಇದರ ವಿಶೇಷತೆ. ಕೋಲು ಮತ್ತು ಗೆಜ್ಜೆಗಳು ಈ ಆಟದಲ್ಲಿ ಬಳಸುವ ಮುಖ್ಯ ಪರಿಕರಗಳು. ಈ ಆಟಕ್ಕೆ ಬಳಸುವ ಕೋಲುಗಳು ಸಾಮಾನ್ಯವಾಗಿ ಒಂದೂವರೆ ಅಡಿ ಉದ್ದವಿರುತ್ತವೆ. ಕೋಲಾಟದಲ್ಲಿ ಸುಮಾರು 59 ವಿಧಗಳಿವೆ. ಅವುಗಳಲ್ಲಿ ಸುತ್ತುಕೋಲು, ಜಡೇ ಕೋಲು, ಗೀಜುಗನ ಕೋಲು, ತೇರು ಕೋಲು, ಮನೆ ಕೋಲು, ಕೊರವಂಜಿ ಕೋಲು ಮುಂತಾದುವುಗಳು ಪ್ರಮುಖವಾಗಿವೆ.


ಕೋಲಾಟಕ್ಕೆ ವಿಶೇಷ ವೇಷಭೂಷಣ ಬೇಕೆಂದೇನೂ ಇಲ್ಲ. ಆದರೆ ಕೆಲವು ಕಡೆ ಸಾಂಪ್ರದಾಯಿಕವಾಗಿ ವೇಷ ಭೂಷಣಗಳನ್ನು ಧರಿಸಿ ಕೋಲಾಟ ಆಡುತ್ತಾರೆ. ಈ ವೇಷ ಭೂಷಣಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ. ಕೋಲಾಟದಲ್ಲಿ ಮಹಿಳೆಯರು ಮತ್ತು ಪುರುಷರು ಒಟ್ಟಾಗಿಯೂ ಆಡುತ್ತಾರೆ. ಸಾಮಾನ್ಯವಾಗಿ ಈ ನೃತ್ಯದಲ್ಲಿ ಪುರುಷರು ತಲೆಗೆ ಮುಂಡಾಸು, ಉದ್ದನೆಯ ಅಂಗಿ, ನಡುವಿಗೆ ಕೆಂಪು ವಸ್ತ್ರ, ಕಾಲಿಗೆ ಗೆಜ್ಜೆ ಪಂಚೆ ಕಟ್ಟಿ ಕೊಂಡಿರುತ್ತಾರೆ. ಮಹಿಳೆಯರು ಬಣ್ಣ ಬಣ್ಣದ ಲಂಗ – ದಾವಣಿ ತೊಡುತ್ತಾರೆ. ವಿವಿಧ ರೀತಿಯ ಅಲಂಕಾರದ ಒಡವೆಗಳನ್ನು ಹಾಕಿಕೊಂಡು ಗುಂಪಿನಲ್ಲಿ ಕೋಲಾಟವನ್ನು ಆಡುತ್ತಾರೆ.

©KTBS
Not to be republished

ದಿನಾಂಕ : ..................................        ಶಿಕ್ಷಕರ ಸಹಿ

# 8. ಕೋಲಾಟ





ಸ್ಥಳೀಯ ಮಟ್ಟದಲ್ಲಿ ಈ ಆಟಕ್ಕೆ ಸ್ಪರ್ಧೆಗಳನ್ನು ಏರ್ಪಡಿಸುತ್ತಾರೆ. ಹಲವಾರು ತಂಡಗಳು ಪೈಪೋಟಿಯಿಂದ ಭಾಗವಹಿಸಿ ತಮ್ಮ ಕೌಶಲ, ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತವೆ. ಸುತ್ತಲೂ ನಿಂತ ಜನ ತಂಡಗಳಿಗೆ ಪ್ರೋತ್ಸಾಹಿಸುತ್ತಾರೆ. ಗೆದ್ದವರಿಗೆ ಬಹುಮಾನ ಮತ್ತು ಪಾರಿತೋಷಕ ನೀಡುತ್ತಾರೆ. ಗೆದ್ದ ತಂಡವನ್ನು ವಿಜೃಂಭಣೆಯಿಂದ ಊರಲ್ಲಿ ಮೆರವಣಿಗೆ ಮಾಡುತ್ತಾರೆ. ಇತ್ತೀಚೆಗೆ ಶಾಲಾ ಕಾಲೇಜುಗಳಲ್ಲಿ ಹಾಗೂ ಸಂಘ – ಸಂಸ್ಥೆಗಳಲ್ಲಿ ನಿಯಮಿತವಾಗಿ ಕೋಲಾಟದ ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದಾರೆ. ಹೀಗೆ ಕೋಲಾಟ ಅನೇಕ ವೈವಿಧ್ಯತೆಯಿಂದ ಕೂಡಿ ಎಲ್ಲ ಜನರ ರಂಜನೀಯ ಜನಪದ ಕಲೆಯಾಗಿದೆ.

© KTBS Not to be republished

ದಿನಾಂಕ : ..................................

ಶಿಕ್ಷಕರ ಸಹಿ

# 8. ಪದಗಳ ಅರ್ಥ



## ಹೊಸ ಪದಗಳ ಅರ್ಥ

| | | |
|---|---|---|
| ಪರಿ | — | ರೀತಿ |
| ಸೊಗಡು | — | ಹಿನ್ನೆಲೆ, ಶೈಲಿ |
| ಪರಿಕರ | — | ಸಾಮಗ್ರಿ |
| ಧರಿಸು | — | ತೊಡು, ಹಾಕಿಕೊ |
| ಭಿನ್ನವಾದ | — | ಬೇರೆಯಾದ |
| ಕೌಶಲ | — | ಪರಿಣಿತಿ, ಜಾಣತನ |
| ಪಾರಿತೋಷಕ | — | ನೆನಪಿನ ಕಾಣಿಕೆ, ಬಹುಮಾನ |
| ರಂಜನೆ | — | ಸಂತೋಷ, ಆನಂದ, ಮುದ |
| ನಡು | — | ಸೊಂಟ, ಕಟಿ |
| ವಿಜೃಂಭಣೆ | — | ಆಡಂಬರ, ವೈಭವ |
| ಪೈಪೋಟಿ | — | ಸ್ಪರ್ಧೆ, ಮೇಲಾಟ |

©KTBS Not to be republished

## ಗಮನಿಸಿ ತಿಳಿ

| | | |
|---|---|---|
| ಗ್ರಾಮೀಣ | — | ಹಳ್ಳಿಗಳ ಪ್ರದೇಶ |
| ಮುಂಡಾಸು | — | ಬಟ್ಟೆಯಿಂದ ಸುತ್ತಿದ ಪೇಟ |
| ವೇಷಭೂಷಣ | — | ಉಡುಗೆ ತೊಡುಗೆಗಳು |
| ಸಾಂಪ್ರದಾಯಿಕ | — | ಹಿಂದಿನಿಂದಲೂ ಆಚರಣೆಯಲ್ಲಿರುವ ಪದ್ಧತಿ |
| ಪ್ರದರ್ಶಿಸು | — | ಎಲ್ಲರಿಗೂ ಕಾಣುವಂತೆ ಇಡು |

ದಿನಾಂಕ : ................................. ಶಿಕ್ಷಕರ ಸಹಿ

## ಅ) ಮಾದರಿಯಂತೆ ಅರ್ಥ ಹೊಂದಿಸಿ ಕೆಳಗಿನ ಗೆರೆಗಳಲ್ಲಿ ಬರೆ.

| "ಅ' | "ಬ' |
|---|---|
| ಧರಿಸು | ನೆನಪಿನ ಕಾಣಿಕೆ |
| ರಂಜನೆ | ಜಾಣತನ |
| ಪಾರಿತೋಷಕ | ರೀತಿ |
| ಕೌಶಲ | ಸಂತೋಷ |
| ಪರಿ | ತೊಡು |
| | ಸ್ಪರ್ಧೆ |

ಮಾದರಿ : ಪರಿ – ರೀತಿ

1. ________________________

2. ________________________

3. ________________________

4. ________________________

## ಆ) ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬು.

1. ಕೋಲಾಟವು ಒಂದು __________
2. ಕೋಲಾಟವು __________ ಸೊಗಡಿನಿಂದ ಕೂಡಿದ ಆಟವಾಗಿದೆ.
3. ಕೋಲಾಟಕೆ __________ ಬೇಕೆಂದೇನೂ ಇಲ್ಲ.
4. ಕೋಲಾಟವು ಎಲ್ಲಾ ಜನರ __________ ಜನಪದ ಕಲೆಯಾಗಿದೆ.
5. ಕೋಲಾಟದ ವೇಷ ಭೂಷಣಗಳು ಪ್ರದೇಶದಿಂದ ಪ್ರದೇಶಕ್ಕೆ __________

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



## ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.

ಮಾದರಿ : ಗ್ರಾಮೀಣ : ಕೋಲಾಟವು ಗ್ರಾಮೀಣ ಜನತೆಯ ಹೃದಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.

1. ಮುಂಡಾಸು : ______________________
2. ಪಾರಿತೋಷಕ : ______________________
3. ಜಾಣತನ : ______________________
4. ಸ್ಪರ್ಧೆ : ______________________

## ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಸಾಮಾನ್ಯವಾಗಿ ಕೋಲಾಟದಲ್ಲಿ ಬಳಸುವ ಕೋಲಿನ ಉದ್ದವೆಷ್ಟು ?

______________________

2. ಕೋಲಾಟದಲ್ಲಿ ಬಳಸುವ ಎರಡು ಪ್ರಮುಖ ಪರಿಕರಗಳು ಯಾವುವು ?

______________________

3. ಕೋಲಾಟದಲ್ಲಿ ಎಷ್ಟು ವಿಧಗಳಿವೆ ?

______________________

4. ಕೋಲಾಟದಲ್ಲಿ ಪುರುಷರು ತಲೆಗೆ ಸುತ್ತುವ ಬಟ್ಟೆಗೆ ಏನೆನ್ನುತ್ತಾರೆ ?

______________________

## ಇ) ಈ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆ.

1. ಕೋಲಾಟದ ಯಾವ ಪರಿ ನೋಡುಗರನ್ನು ಆಕರ್ಷಿಸುತ್ತದೆ ?

______________________

______________________

2. ಕೋಲಾಟದ ಪ್ರಮುಖ ವಿಧಗಳು ಯಾವುವು ?

______________________

______________________

3. ಕೋಲಾಟ ಆಡುವವರು ಏಕೆ ಅಲಂಕಾರಿಕ ಉಡುಪನ್ನು ಧರಿಸಬೇಕು?

______________________

______________________

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ

ಸೂಚನೆ : ಚಿತ್ರ ನೋಡಿ ಪದ ಬರೆ.

 ________________

 ________________

 ________________

 ________________

ಮೇಲಿನ ಪದಗಳನ್ನು ಬಳಸಿ ಎರಡೆರಡು ವಾಕ್ಯಗಳನ್ನು ರಚಿಸಿ.

1.

2.

3.

4.

ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ

**ಸೂಚನೆ :** ನೀಡಿರುವ ಕೋಷ್ಟಕದಲ್ಲಿನ ಪದಗಳನ್ನು ಓದಿ.
ಅರ್ಥ ಪೂರ್ಣ ವಾಕ್ಯಗಳನ್ನು ರಚಿಸಿ ಬರೆ.

| | | |
|---|---|---|
| ಮಹೇಶ<br>ಶಿಲ್ಪ<br>ಕೋಗಿಲೆ<br>ರಮ್ಯ<br>ನವಿಲು<br>ರವಿ | ಹಾಡನ್ನು<br>ನೃತ್ಯ<br>ಊಟ | ಹಾಡಿದಳು<br>ಹಾಡಿತು<br>ಮಾಡಿತು<br>ಹಾಡಿದನು<br>ಮಾಡಿದಳು<br>ಮಾಡಿದನು |

1. ______________________________

2. ______________________________

3. ______________________________

4. ______________________________

5. ______________________________

6. ______________________________


ದಿನಾಂಕ : ..................................

ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ

**ಸೂಚನೆ :** ಕೆಳಗಿನ ಚಿತ್ರವನ್ನು ಗಮನಿಸು. ಮೊದಲನೇ ಬಸವನ ಮೇಲಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳು ಎರಡನೇ ಬಸವನ ಮೇಲಿವೆ. ಅವುಗಳನ್ನು ಮಾದರಿಯಂತೆ ಆರಿಸಿ ಬರೆ.




©KTBS Not to be republished

ಮಾದರಿ : ಉದ್ದ x ಗಿಡ್ಡ

1. ________ x ________
2. ________ x ________
3. ________ x ________
4. ________ x ________
5. ________ x ________
6. ________ x ________
7. ________ x ________
8. ________ x ________

ದಿನಾಂಕ : ..................................

ಶಿಕ್ಷಕರ ಸಹಿ

# ನನ್ನ ಬಗ್ಗೆ ನಿನಗೆ ಗೊತ್ತೆ ?



ಸೂಚನೆ : ಚಿತ್ರವನ್ನು ಗಮನಿಸು, ಪ್ರಶ್ನೆಗಳಿಗೆ ಉತ್ತರ ಬರೆ.



1. ಇದು ಯಾವ ಚಿತ್ರ ?

2. ಎತ್ತಿನ ಗಾಡಿಯನ್ನು ಯಾವ ವಸ್ತುಗಳಿಂದ ತಯಾರಿಸುತ್ತಾರೆ?

3. ಗಾಡಿಯಿಂದ ನಮಗಾಗುವ ಪ್ರಯೋಜನಗಳೇನು ?

4. ನಿನಗೆ ಅವಕಾಶ ಕೊಟ್ಟರೆ ಯಾವ ವಸ್ತುಗಳಿಂದ ಗಾಡಿ ತಯಾರಿಸುವೆ?

ದಿನಾಂಕ : .................................. ಶಿಕ್ಷಕರ ಸಹಿ

©KTBS Not to be republished

# ವಾಕ್ಯ ರಚಿಸು



**ಸೂಚನೆ : ಚಿತ್ರವನ್ನು ಸರಿಯಾಗಿ ಗಮನಿಸು. ಅದಕ್ಕೆ ಸಂಬಂಧಿಸಿದಂತೆ ಐದು ವಾಕ್ಯಗಳನ್ನು ಬರೆ.**



1. ______________________________

2. ______________________________

3. ______________________________

4. ______________________________

5. ______________________________

© KTBS Not to be republished

ದಿನಾಂಕ : ..................................

ಶಿಕ್ಷಕರ ಸಹಿ

# 9. ನ್ಯಾಯ ನಿರ್ಣಯ



## ದೃಶ್ಯ-1



**ಭಟರು** : ಮಹಾರಾಣಿಯವರಿಗೆ ಬಹುಪರಾಕ್.... ಬಹುಪರಾಕ್.... (ನಮಸ್ಕರಿಸಿ ಪಕ್ಕಕ್ಕೆ ಸರಿಯುವರು. ಎಲ್ಲರೂ ಕುಳಿತು ಕೊಳ್ಳುವರು. ಹೊರ ರಾಜ್ಯದ ಪಂಡಿತರು ಆಗಮಿಸುವರು)

**ಮಂತ್ರಿ** : ಮಹಾರಾಣಿಯವರೇ, ಇಂದು ನಮ್ಮ ಸಭೆಗೆ ಸುವರ್ಣಪುರಿ ರಾಜ್ಯದ ವೇದಾಂತ ಪಂಡಿತರು ಆಗಮಿಸಿದ್ದಾರೆ.

**ವೇದಾಂತ ಪಂಡಿತರು** : ಮಹಾರಾಣಿಯವರಿಗೆ ಜಯವಾಗಲಿ (ನಮಸ್ಕರಿಸುವರು)

**ಮಹಾರಾಣಿ** : ಪಂಡಿತರೆ, ನೀವು ನಮ್ಮ ಆಸ್ಥಾನಕ್ಕೆ ಆಗಮಿಸಿದ್ದು ತುಂಬಾ ಸಂತೋಷ. ನಮ್ಮ ಆಡಳಿತದ ಬಗ್ಗೆ ತಮ್ಮ ಅಭಿಪ್ರಾಯವೇನು?

**ವೇದಾಂತ ಪಂಡಿತರು** : ಮಹಾರಾಣಿಯವರೆ, ತಮ್ಮ ಆಡಳಿತದಲ್ಲಿ ಪ್ರಜೆಗಳು ಸುಖದಿಂದ ಬಾಳುತ್ತಿದ್ದಾರೆ. ಆದರೆ ತಮ್ಮ ರಾಜ್ಯದಲ್ಲಿ ನ್ಯಾಯನಿರ್ಣಯವು ಸಮಂಜಸವಾಗಿಲ್ಲ ಎಂದು ನನಗನಿಸುತ್ತದೆ.

**ಮಹಾರಾಣಿ** : (ಕುತೂಹಲದಿಂದ) ಹಾಗಾದರೆ, ನ್ಯಾಯ ನಿರ್ಣಯವು ಹೇಗಿರಬೇಕು?

**ವೇದಾಂತ ಪಂಡಿತರು** : ಮಹಾರಾಣಿ, ನ್ಯಾಯನಿರ್ಣಯವು ಜಾತಿಮತದ ಆಧಾರವಾಗಿರಬೇಕು.

**ಮಂತ್ರಿ** : (ಕೋಪದಿಂದ) ಪಂಡಿತರೇ, ನೀವು ನಮ್ಮ ರಾಜ್ಯದ ನ್ಯಾಯ ನಿರ್ಣಯವನ್ನು ಚರ್ಚಿಸುವುದು ಸರಿಯೇ?

ದಿನಾಂಕ : ..................................    ಶಿಕ್ಷಕರ ಸಹಿ

©KTBS Not to be republished

# 9. ನ್ಯಾಯ ನಿರ್ಣಯ



ಆಸ್ಥಾನ
ಪಂಡಿತ : (ಕೋಪದಿಂದ) ಮಹಾರಾಣಿಯವರೇ, ತಮ್ಮ ಎದುರೇ ನಮ್ಮ ನ್ಯಾಯ ವಿಧಾನವನ್ನು ಟೀಕಿಸುವುದು ಸರಿಯಲ್ಲ. ಇವರನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕು.

ಮಹಾರಾಣಿ : ಸಾವಧಾನ, ಎಲ್ಲರೂ ಶಾಂತಚಿತ್ತದಿಂದ ಆಲಿಸಿರಿ. ಪಂಡಿತರೇ, ನೀವು ಹೇಳಬೇಕಾದುದನ್ನು ಹೇಳಿರಿ.

ವೇದಾಂತ
ಪಂಡಿತರು : ಮಹಾರಾಣಿಯವರೇ, ತಾವು ತಿಳಿದವರು. ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದು ಅಪರಾಧವೇ?

ಮಹಾರಾಣಿ : ನ್ಯಾಯ ನಿರ್ಣಯಕ್ಕೆ ಸಂಬಂಧಿಸಿದಂತೆ ನಾಳೆ ಒಂದು ಸಣ್ಣ ಪರೀಕ್ಷೆ ನಡೆಸೋಣ. ಇಂದಿನ ಸಭೆ ಮುಕ್ತಾಯವಾಗಲಿ.

## ದೃಶ್ಯ : 2



ಮಹಾರಾಣಿ : ಮಂತ್ರಿಗಳೇ, ನಾವೊಂದು ಉಪಾಯ ಮಾಡೋಣ

(ರಾಣಿ ಮಂತ್ರಿಯ ಕಿವಿಯಲ್ಲಿ ಹೇಳುವರು)

ಮಂತ್ರಿ : ಭಟರೇ, ಆ ಪಂಡಿತರ ಕಣ್ಣಿಗೆ ಬಟ್ಟೆಕಟ್ಟಿ ಕರೆ ತನ್ನಿ (ಆ ಹೊತ್ತಿಗೆ ಬೆಕ್ಕು, ನಾಯಿ, ಕುರಿ ಮತ್ತು ಕೆಲವು ವ್ಯಕ್ತಿಗಳನ್ನು ತಂದು ನಿಲ್ಲಿಸಲಾಗುತ್ತದೆ) ಪಂಡಿತರೇ, ಇಲ್ಲಿರುವ ಪ್ರಾಣಿಗಳನ್ನು ಒಂದೊಂದಾಗಿ ಗುರುತಿಸಿ.

ದಿನಾಂಕ : .................................. ಶಿಕ್ಷಕರ ಸಹಿ

© KTBS Not to be republished

ವೇದಾಂತ ಪಂಡಿತರು : (ಮುಟ್ಟುತ್ತಾ) ಇದು ಬೆಕ್ಕು, ನಾಯಿ, ಕುರಿ, ಮನುಷ್ಯ.... ಮನುಷ್ಯ..... (ತಡಕಾಡುತ್ತಾ ಗುರುತಿಸುವರು)

ಮಹಾರಾಣಿ : ಪಂಡಿತರೇ, ಪ್ರಾಣಿಗಳ ಜಾತಿಗಳನ್ನು ಗುರುತಿಸಿದಿರಿ. ಅದರಂತೆ ಮನುಷ್ಯರ ಜಾತಿಗಳನ್ನು ಗುರುತಿಸಿ.

ವೇದಾಂತ ಪಂಡಿತರು : ಮುಟ್ಟುವುದರ ಮೂಲಕ ಮನುಷ್ಯರ ಜಾತಿಗಳನ್ನು ಗುರುತಿಸಲು ಸಾಧ್ಯವೇ?

ಮಹಾರಾಣಿ : ಭಟರೇ, ಪಂಡಿತರ ಕಣ್ಣಿನ ಪಟ್ಟಿ ಬಿಚ್ಚಿರಿ.... ಪಂಡಿತರೇ, ಪ್ರಾಣಿ ಭೇದ ಪ್ರಕೃತಿ ಸಹಜ. ಆದರೆ ಜಾತಿ ಭೇದ ಮಾನವ ನಿರ್ಮಿತ. ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. ಆದುದರಿಂದ ನ್ಯಾಯ ನಿರ್ಣಯವು ಮಾನವೀಯತೆಯ ಆಧಾರದಲ್ಲಿರಬೇಕು. ಆದರೆ ಜಾತಿ, ಮತ, ಹಣ, ಅಂತಸ್ತುಗಳ ಆಧಾರದಲ್ಲಿ ಅಲ್ಲ.

ವೇದಾಂತ ಪಂಡಿತರು : ಮಹಾರಾಣಿಯವರೇ, ತಮ್ಮಂತಹ ಮಹಾರಾಣಿಯನ್ನು ಪಡೆದ ಈ ಪ್ರಜೆಗಳೇ ಧನ್ಯರು.

ಎಲ್ಲರೂ : ಮಹಾರಾಣಿಯವರಿಗೆ ಜಯವಾಗಲಿ, ಮಹಾರಾಣಿಯವರಿಗೆ ಜಯವಾಗಲಿ.

----

## ಹೊಸ ಪದಗಳ ಅರ್ಥ :

ಸಮಂಜಸ – ಸರಿಯಾದ, ಸೂಕ್ತವಾದ

ಬಂಧಿಸು – ಸೆರೆಹಿಡಿ

ನಿರ್ಣಯ – ತೀರ್ಮಾನ

ಪ್ರಕಟಿಸು – ಹೊರಗೆಡು, ಬಹಿರಂಗಪಡಿಸು, ಘೋಷಿಸು

ಸಮ್ಮತಿ – ಒಪ್ಪಿಗೆ

ದಿನಾಂಕ : ..................................                ಶಿಕ್ಷಕರ ಸಹಿ

©KTBS Not to be republished

# ಅಭ್ಯಾಸ



## ಅ) 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿರುವ ಅರ್ಥಗಳನ್ನು ಹೊಂದಿಸಿ ಬರೆ.

| 'ಅ' ಪಟ್ಟಿ | | 'ಬ' ಪಟ್ಟಿ | |
|---|---|---|---|
| 1. | ಸಮಂಜಸ | ಅ) ತೀರ್ಮಾನ | .............................. |
| 2. | ಬಂಧಿಸು | ಆ) ಸರಿಯಾದ | .............................. |
| 3. | ನಿರ್ಣಯ | ಇ) ಒಪ್ಪಿಗೆ | .............................. |
| 4. | ಪ್ರಕಟಿಸು | ಈ) ಆಗಮಿಸು | .............................. |
| 5. | ಸಮ್ಮತಿ | ಉ) ಬಹಿರಂಗಪಡಿಸು | .............................. |
| | | ಊ) ಸೆರೆಹಿಡಿ | .............................. |

## ಆ) ಆವರಣದಿಂದ ಸೂಕ್ತ ಪದವನ್ನು ಆಯ್ದು ಬಿಟ್ಟ ಸ್ಥಳದಲ್ಲಿ ಬರೆ.

(ಕಣ್ಣು, ಮಾನವ ನಿರ್ಮಿತ, ಸುವರ್ಣಪುರಿ, ಸರಿಸಮಾನರು, ಮಾನವೀಯತೆ, ಜಾತಿಯತೆ)

1. ವೇದಾಂತ ಪಂಡಿತರು ________________ ರಾಜ್ಯದಿಂದ ಆಗಮಿಸಿದ್ದರು.
2. ಪಂಡಿತರ ಅಭಿಪ್ರಾಯದಂತೆ ನ್ಯಾಯನಿರ್ಣಯವು ____________ ಆಧಾರವಾಗಿರಬೇಕು.
3. ಪಂಡಿತರಿಗೆ ________________ ಕಟ್ಟಿ ಕರೆದುಕೊಂಡು ಬಂದರು.
4. ರಾಣಿಯ ಅಭಿಪ್ರಾಯದಂತೆ ನ್ಯಾಯನಿರ್ಣಯವು ________________ ಆಧಾರವಾಗಿರಬೇಕು.
5. ಪ್ರಾಣಿಭೇದ ಪ್ರಕೃತಿ ಸಹಜ, ಆದರೆ ಜಾತಿಭೇದ________________
6. ದೇವರ ಸೃಷ್ಟಿಯಲ್ಲಿ ಎಲ್ಲರೂ ________________

ದಿನಾಂಕ : ..................................                                   ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



ಅ) ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ ಬರೆ.

1. ಉಪಾಯ : __________
2. ಬಂಧಿಸು : __________
3. ಸಂತೋಷ : __________
4. ಪ್ರಕಟಿಸು : __________
5. ಸಮ್ಮತಿ : __________

ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಪರ್ವತಪುರ ರಾಜ್ಯದಲ್ಲಿ ಪ್ರಜೆಗಳು ಹೇಗೆ ಬಾಳುತ್ತಿದ್ದರು?

2. ವೇದಾಂತ ಪಂಡಿತರು ಯಾವ ರಾಜ್ಯದಿಂದ ಬಂದಿದ್ದರು?

3. ಪಂಡಿತರ ಅಭಿಪ್ರಾಯದಂತೆ ನ್ಯಾಯ ನಿರ್ಣಯವು ಹೇಗಿರಬೇಕು?

4. ವೇದಾಂತ ಪಂಡಿತರು ಯಾವ ಯಾವ ಪ್ರಾಣಿಗಳನ್ನು ಗುರುತಿಸಿದರು?

5. ಪಂಡಿತರ ಮಾತನ್ನು ಯಾರು ಯಾರು ವಿರೋಧಿಸಿದರು?

6. ನಿನ್ನ ದೃಷ್ಟಿಯಲ್ಲಿ ನ್ಯಾಯ ನಿರ್ಣಯವು ಯಾವ ಆಧಾರದಲ್ಲಿರಬೇಕು ?

©KTBS Not to be republished

# ಪ್ರಶ್ನೋತ್ತರ



ಇ) ಈ ಮಾತನ್ನು ಯಾರು – ಯಾರಿಗೆ ಹೇಳಿದರು?

1. "ನಿಮ್ಮ ನ್ಯಾಯ ನಿರ್ಣಯ ಸಮಂಜಸವಾಗಿಲ್ಲ".

______________________________

______________________________

2. "ಇವರನ್ನು ಬಂಧಿಸಿ ಶಿಕ್ಷೆಗೊಳಪಡಿಸಿ".

______________________________

______________________________

3. "ಪ್ರಜೆಗಳು ಸುಖ ನೆಮ್ಮದಿಯಿಂದ ಬಾಳುತ್ತಿದ್ದಾರೆ".

______________________________

______________________________

4. "ನ್ಯಾಯ ನಿರ್ಣಯವು ಮಾನವೀಯತೆಯ ಆಧಾರದಲ್ಲಿರಬೇಕು"

______________________________

______________________________

ಈ) ಮಾದರಿಯಂತೆ ಕೊಟ್ಟಿರುವ ಅಕ್ಷರಗಳನ್ನು ಬಳಸಿಕೊಂಡು ಅರ್ಥ ಪೂರ್ಣ ಪದ ಬರೆ.

| | | | | | | |
|---|---|---|---|---|---|---|
| ಮಾದರಿ : | ಪು | ರ್ವ | ರಿ | ಪ | ತ | ಪರ್ವತಪುರಿ |
| 1. | ರು | ಸ | ನ | ಮಾ | | ______ |
| 2. | ಮಂ | ಸ | ಸ | ಜ | | ______ |
| 3. | ಹಾ | ರಾ | ಣಿ | ಮ | | ______ |

ದಿನಾಂಕ : ...................................

ಶಿಕ್ಷಕರ ಸಹಿ

©KTBS Not to be republished

## ಭಾಷಾಭ್ಯಾಸ



ಅ) ಲೇಖನ ಚಿಹ್ನೆ ಅನುಸರಿಸಿ, ಈ ಸನ್ನಿವೇಶವನ್ನು ಓದು.



ಅಂದು ರಜಾದಿನ. ಆಟ ಆಡಲೆಂದು ಮೀರಾಳ ಗೆಳೆಯರೆಲ್ಲರೂ ಮನೆಗೆ ಬಂದರು. ಅವರು ಗೊಂಬೆ, ಡಬ್ಬಿ, ಕಾರು, ಬಸ್ಸು, ವಿಮಾನ, ಲಾರಿ ಇತ್ಯಾದಿ ಆಟಿಕೆಗಳನ್ನು ಬಳಸಿ ಆಟ ಆಡಿದರು. ನಂತರ ಮೀರಾಳ ತಾಯಿ ಎಲ್ಲರಿಗೂ ಗಿಣ್ಣು ಕೊಟ್ಟರು. ಗಿಣ್ಣು ತಿಂದ ಮಕ್ಕಳು "ಆಹಾ ! ಎಷ್ಟು ಚೆನ್ನ ಈ ಗಿಣ್ಣು !" ಎಂದು ಉದ್ಗರಿಸಿದರು.

"ಗಿಣ್ಣನ್ನು ಯಾವುದರಿಂದ ಮಾಡುತ್ತಾರೆ ?" ಎಂದು ಮಕ್ಕಳು ಕೇಳಿದರು. "ಹಸು ಕರು ಹಾಕಿದಾಗ ಮೊದಲು ಕರೆಯುವ ಹಾಲಿನಿಂದ ಗಿಣ್ಣನ್ನು ಮಾಡುತ್ತಾರೆ" ಎಂದರು ಮೀರಾಳ ತಾಯಿ. ಎಲ್ಲರೂ ಕರುವನ್ನು ನೋಡಲು ಕೊಟ್ಟಿಗೆಗೆ ಹೋದರು.

————

ಆ) ವಾಕ್ಯವನ್ನು ಓದು ಸೂಕ್ತ ಸ್ಥಳದಲ್ಲಿ ಸೂಕ್ತ ಲೇಖನ ಚಿಹ್ನೆಯನ್ನು ಬರೆ.

1. ಇದು ಯಾವ ಆಟ ಇರಬಹುದು
2. ಆಹಾ ಈ ಜಲಪಾತ ಎಷ್ಟು ಅದ್ಭುತವಾಗಿದೆ
3. ರಜಾ ದಿನದಂದು ರವಿ ಸುಮ ಪೀಟರ್ ರೇಷ್ಮಾ ಗದ್ದೆ ಬಯಲಿಗೆ ಬಂದರು

ದಿನಾಂಕ : ..........................                ಶಿಕ್ಷಕರ ಸಹಿ

©KTBS Not to be republished

**ಇ) ಆವರಣದಲ್ಲಿ ಕೊಟ್ಟಿರುವ ಸೂಕ್ತ ಪದಗಳಿಂದ ಕೆಳಗೆ ನೀಡಲಾದ ಕಥಾ ಭಾಗವನ್ನು ಪೂರ್ಣಗೊಳಿಸು.**

(ಹಲ್ಲಿ , ದನ, ಹಗ್ಗ, ಝರಿ, ಹಕ್ಕಿ, ಹಾರಿ, ಅಗ್ಗ, ಧನ, ಅಕ್ಕಿ, ಆರು)

ಒಂದು ಊರಿನಲ್ಲಿ ಒಬ್ಬ ರೈತನಿದ್ದನು. ಅವನ ಬಳಿ ಬಹಳಷ್ಟು ____________ ಕರುಗಳಿದ್ದವು. ಹಸುಗಳ ಹಾಲನ್ನು ಮಾರಿ ____________ ಸಂಪಾದಿಸಿದನು. ಅವನು ಅನ್ನ ಮಾಡಲು ____________ ತರುವುದಕ್ಕಾಗಿ ಪೇಟೆಗೆ ಹೊರಟನು. ದಾರಿಯಲ್ಲಿ ____________ ಯೊಂದು ಹಾರಿ ಬಂದು ಅವನ ಮುಂದೆ ಕುಳಿತಿತು. ಅವನು ಹಕ್ಕಿಯನ್ನು ಹಿಡಿದು ತಂದು ____________ ದ ಬೆಲೆಗೆ ಮಾರಿ ಮನೆಗೆ ಹೊರಟನು. ದಾರಿಯಲ್ಲಿ ಬೆಟ್ಟದಿಂದ ಹರಿಯುತ್ತಿದ್ದ ____________ ಯನ್ನು ಕಂಡು ಖುಷಿಪಟ್ಟನು. ಅಲ್ಲಿದ್ದ ಪಾರಿವಾಳಗಳು ಅವನನ್ನು ಕಂಡು ಹೆದರಿ ____________ ಹೋದವು. ರೈತನು ಮನೆಗೆ ಬಂದು ಬಾಗಿಲು ತೆರೆದನು. ಅಲ್ಲಿಯೇ ಇದ್ದ ____________ ಯೊಂದು ಅವನ ಮೇಲೆ ಬಿದ್ದಿತು.

**ಈ) ಕೊಟ್ಟಿರುವ ವಾಕ್ಯಗಳನ್ನು ತಪ್ಪಿಲ್ಲದಂತೆ, ವೇಗವಾಗಿ ಹಲವು ಬಾರಿ ಹೇಳು. ನಂತರ ನೋಟ್ ಪುಸ್ತಕದಲ್ಲಿ ಬರೆ.**

1. ಕೆಂಪು ಕುಂಕುಮ, ಕಪ್ಪು ಕುಂಕುಮ
2. ಕಾಗೆ ಪುಕ್ಕ, ಗುಬ್ಬಿ ಪುಕ್ಕ
3. ಹೊಟ್ಟೆ ಪುಟ್ಟಗೆ, ಜುಟ್ಟು ನೆಟ್ಟಗೆ
4. ಅತಲ, ವಿತಲ, ಸುತಲ, ರಸಾತಲ
5. ಬಸಪ್ಪನ ಮನೆಯಲ್ಲಿ, ಗಸಗಸೆ ಪಾಯಸ

ದಿನಾಂಕ : ..........................

ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ

ಅ) ಮೊದಲ ವಾಕ್ಯದಲ್ಲಿ ಗೆರೆ ಎಳೆದಿರುವ ಪದದ ಅರ್ಥವನ್ನು ಗುರುತಿಸು. ಎರಡನೆಯ ಸಾಲಿನ ಬಿಟ್ಟ ಸ್ಥಳದಲ್ಲಿ ಮಾದರಿಯಂತೆ ಆ ಪದದ ವಿರುದ್ಧಾರ್ಥಕ ಪದವನ್ನು ಬರೆದು ವಾಕ್ಯಗಳ ಅರ್ಥ ವ್ಯತ್ಯಾಸ ತಿಳಿ.

ಮಾದರಿ : ಸೂರ್ಯ ಉದಯಿಸಿದಾಗ ಬೆಳಕು ಮೂಡುತ್ತದೆ.

ಸೂರ್ಯ ಮುಳುಗಿದಾಗ ಕತ್ತಲು ಆಗುತ್ತದೆ.

1. ಕ್ರಿಕೆಟ್ ಆಟದಲ್ಲಿ ನಮ್ಮ ದೇಶ ಗೆದ್ದಾಗ ಸಂತೋಷವಾಯಿತು.

   ಕ್ರಿಕೆಟ್ ಆಟದಲ್ಲಿ ನಮ್ಮ ದೇಶ ಸೋತಾಗ ________

2. ಮನೆಯ ಒಳಗೆ ಕೊಠಡಿಗಳಿವೆ.

   ಮನೆಯ ________ ಕಾರುಗಳು ನಿಂತಿವೆ.

3. ಮರದ ಮೇಲೆ ಪಕ್ಷಿ ಕುಳಿತಿದೆ.

   ಮರದ ________ ಹಸು ನಿಂತಿದೆ.

4. ಸಚಿನ್ ಮೊದಲ ಕ್ರಿಕೆಟ್ ಪಂದ್ಯದಲ್ಲಿ ಹೆಚ್ಚು ಓಟ ಗಳಿಸಿದನು.

   ಸಚಿನ್ ಎರಡನೇ ಕ್ರಿಕೆಟ್ ಪಂದ್ಯದಲ್ಲಿ ________ ಓಟ ಗಳಿಸಿದನು.

5. ನಮ್ಮ ಮನೆಯ ಎಡಭಾಗದಲ್ಲಿ ತೆಂಗಿನ ಮರವಿದೆ.

6. ನಮ್ಮ ಮನೆಯ ________ ಭಾಗದಲ್ಲಿ ಬಾವಿಯಿದೆ.

ದಿನಾಂಕ : ..........................                ಶಿಕ್ಷಕರ ಸಹಿ


©KTBS Not to be republished

ಆ) 'ಅ' ಸಾಲಿನಲ್ಲಿ ನೀಡಿರುವ ಪದದೊಂದಿಗೆ "ಬ' ಸಾಲಿನ ಪದ ಜೋಡಿಸಿ ಮಾದರಿಯಂತೆ ಅರ್ಥ ಪೂರ್ಣ ವಾಕ್ಯ ರಚಿಸಿ ಬರೆ.

| ಅ | ಬ | ಮಾದರಿ : |
|---|---|---|
| 1. ಸಾಲಾಗಿ | ಉರುಳಿಸು | 1. ಸಾಲಾಗಿ ಬನ್ನಿ |
| 2. ಗೆರೆ | ಗೂಡು | |
| 3. ಕೈ | ಮೈದಾನ | |
| 4. ಲಗೋರಿ | ಕಲ್ಲು | |
| 5. ಚಪ್ಪಟೆ | ದೂರ | |
| 6. ಚೆಂಡು | ಆಡು | |
| 7. ಸಮಾನ | ಬನ್ನಿ | |
| 8. ಆಟ | ಎಳೆ | |
| 9. ಶಾಲಾ | ಜೋಡಿಸು | |
| 10. ಜೇನು | ಆಟ | |

ಇ) ವೃತ್ತದಲ್ಲಿರುವ ಪದವನ್ನು ಓದು
ವೃತ್ತದ ಹೊರಗೆ ನೀಡಿರುವ ಪದಬಳಸಿ ಮಾದರಿಯಂತೆ ವಾಕ್ಯ ರಚಿಸಿ ಬರೆ.

ಮಾದರಿ: ಚೆಂಡು ಉರುಳಿಸು




ದಿನಾಂಕ : .............................


ಶಿಕ್ಷಕರ ಸಹಿ

©KTBS Not to be republished

# ಭಾಷಾಭ್ಯಾಸ



ಸೂಚನೆ : 'ಕ' ಭಾಗದಲ್ಲಿನ ಚಿತ್ರ ವೀಕ್ಷಿಸು. 'ಬ' ಭಾಗದಲ್ಲಿನ ಮಾದರಿ ವಾಕ್ಯವನ್ನು ಓದು. ಪ್ರತಿ ಚಿತ್ರಕ್ಕೂ ಎರಡೆರಡು ಅರ್ಥ ಪೂರ್ಣ ವಾಕ್ಯಗಳನ್ನು ಮಾದರಿಯಂತೆ ಬರೆ.

| ಕ | ಬ |
|---|---|
|   | ಮಾದರಿ:<br>ರಾಜು ಸಂಭ್ರಮದಿಂದ ಕುಣಿಯುತ್ತಿದ್ದಾನೆ.<br>1. ____________________<br>2. ____________________ |
|  | ಮಾದರಿ:<br>ಸುಪ್ರತಾ ಜೋಕಾಲಿ ಆಡುತ್ತಿದ್ದಾಳೆ.<br>1. ____________________<br>2. ____________________ |
|  | ಮಾದರಿ:<br>ಹಸು ಹುಲ್ಲು ತಿನ್ನುತ್ತಿದೆ.<br>1. ____________________<br>2. ____________________ |

Not to be republished ©KTBS

ದಿನಾಂಕ : ..............................

ಶಿಕ್ಷಕರ ಸಹಿ

# ಲೇಖನ ಚಿಹ್ನೆ ಗುರುತಿಸು



ಅ) ಕೆಳಗೆ ನೀಡಲಾದ ವಿಷಯಾಂಶವನ್ನು ಓದಿಕೊಂಡು, ಮುಂದಿನ ಪುಟದಲ್ಲಿನ ಪ್ರಶ್ನೆಗಳಿಗೆ ಉತ್ತರಿಸು.

ಭಾನುವಾರದಂದು ರಾಮು ತಮ್ಮ ತೋಟಕ್ಕೆ ತನ್ನ ಸ್ನೇಹಿತರಾದ ರಹೀಮ್, ಮೇರಿ, ಆಸ್ಕರ್ ಹಾಗೂ ಜಮೀಲಾರನ್ನು ಕರೆದುಕೊಂಡು ಹೋದನು.

ರಾಮು : ಏಯ್! ರಹೀಮ್, ಆ ಬೇಲಿಯ ಮೇಲೆ ಯಾವುದೋ ಪ್ರಾಣಿ ಹೋಗುತ್ತಿದೆ ನೋಡು.

ಮೇರಿ : ಅದರ ಹೆಸರು ಊಸರವಳ್ಳಿ. ಕೆಲವು ಕಡೆ ಅದನ್ನು "ಗೋಸುಂಬೆ" ಎಂದು ಕರೆಯುತ್ತಾರೆ.

ರಹೀಮ್ : ಅರರೇ! ಅದರ ಮೈ ಬಣ್ಣ ಬದಲಾಯಿತು!

ಮೇರಿ : ಹೌದು, ಅದು ತನ್ನ ಮೈ ಬಣ್ಣ ಬದಲಾಯಿಸುತ್ತಿರುತ್ತದೆ.

ಆಸ್ಕರ್ : ನಾನು ಅದರ ಹತ್ತಿರ ಹೋಗಿ ನೋಡುತ್ತೇನೆ.

ರಾಮು : ಬೇಡ ಆಸ್ಕರ್, ಆ ಬೇಲಿಯಲ್ಲಿ ತುಂಬಾ ಮುಳ್ಳುಗಳಿವೆ.

ಆಸ್ಕರ್ : (ಹೋಗುವನು) ಅಯ್ಯೋ!..... ಅಮ್ಮಾ!..... ಮುಳ್ಳು ತುಳಿದೆ. ತುಂಬಾ ನೋವಾಗುತ್ತಿದೆ!

ಜಮೀಲಾ : ಆಹ್ಹಾ......ಹ್ಹಾ.........ಹ್ಹಾ......... ಹಾಗೆಯೇ ಆಗಬೇಕು. ಬೇಲಿ ಹತ್ತಿರ ಹೋಗಬೇಡ ಅಂದ್ರೂ ಕೇಳಲಿಲ್ಲ ಅಲ್ವಾ?

ಆಸ್ಕರ್ : (ಕೋಪದಿಂದ) ನನ್ನ ನೋಡಿ ನಗುತ್ತೀಯಾ ಜಮೀಲಾ ?

ರಾಮು : ಸುಮ್ಮನಿರು ಜಮೀಲಾ, ಪಾಪ ! ಆಸ್ಕರ್‌ಗೆ ಕಾಲು ತುಂಬಾ ನೋವಾಗಿದೆ.
ಮುಳ್ಳು ತೆಗೆಯೋಣ.
(ಮುಳ್ಳು ತೆಗೆದು ತೋಟದ ಮನೆಗೆ ಹೋದರು)

ದಿನಾಂಕ : .............................. ಶಿಕ್ಷಕರ ಸಹಿ

©KTBS Not to be republished

ಆ) ಸೂಚನೆಯನ್ನು ಅನುಸರಿಸಿ ಇವುಗಳಿಗೆ ಸೂಕ್ತವಾದ ವಾಕ್ಯಗಳನ್ನು ಬರೆ.

1) ಪೂರ್ಣ ವಿರಾಮ ಚಿಹ್ನೆಯಿಂದ ಕೂಡಿರುವ ಎರಡು ವಾಕ್ಯಗಳನ್ನು ಬರೆ.

1. ____________________

2. ____________________

2) ಅಲ್ಪ ವಿರಾಮ ಚಿಹ್ನೆ ಇರುವ ಎರಡು ವಾಕ್ಯಗಳನ್ನು ಬರೆ.

1. ____________________

2. ____________________

3) ಭಾವ ಸೂಚಕ ಚಿಹ್ನೆ ಇರುವ ಎರಡು ವಾಕ್ಯಗಳನ್ನು ಬರೆ.

1. ____________________

2. ____________________

4) ಪ್ರಶ್ನಾರ್ಥಕ ಚಿಹ್ನೆ ಇರುವ ಎರಡು ವಾಕ್ಯಗಳನ್ನು ಬರೆ.

1. ____________________

2. ____________________

©KTBS Not to be republished

ದಿನಾಂಕ : ..............................  ಶಿಕ್ಷಕರ ಸಹಿ

# 10. ಕಿತ್ತೂರು ಚೆನ್ನಮ್ಮ





ಕೇಳಿರಿ ಮಕ್ಕಳೆ ನಾಳಿನ ಪ್ರಜೆಗಳೆ
ಕೇಳಿರಿ ಹೇಳುವೆ ಮಾತೊಂದ ।
ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ
ಕಿತ್ತೂರು ರಾಣಿಯ ಕಥೆಯೊಂದ ॥

ಬೆಳಗಾಂ ಜಿಲ್ಲೆಯ ಕಾಕತಿಯಲ್ಲಿ
ವೀರ ಪುತ್ರಿಯು ಜನಿಸಿಹಳು ।
ದೂಳಪ್ಪ ದೇಸಾಯಿ ಪದ್ಮಾವತಿಯ
ಕುಲಪುತ್ರಿಯೇ ಚೆನ್ನಮ್ಮ ॥

ತಂದೆಯೊಡನೆ ಪುರುಷ ವೇಷದಿ
ಬೇಟೆಗೆ ಕಾಡಿಗೆ ಹೋಗಿಹಳು ।
ಕತ್ತಿ ವರಸೆ ಬಿಲ್ಲು ಬಾಣ
ಕುದುರೆ ಸವಾರಿಯ ಕಲಿತಿಹಳು ॥

ಕಿತ್ತೂರು ದೊರೆ ಮಲ್ಲಸರ್ಜನ
ಪ್ರೀತಿಯ ಮಡದಿ ಎನಿಸಿಹಳು ।
ಮಲ್ಲಸರ್ಜನ ಮರಣ ನಂತರ
ಕಿತ್ತೂರು ರಾಣಿಯೇ ಆಗಿಹಳು ॥



ಕಿತ್ತೂರು ನಾಡಿನ ಸ್ವಾತಂತ್ರ್ಯಕ್ಕಾಗಿ
ಬ್ರಿಟಿಷರ ವಿರುದ್ಧ ಹೋರಾಡಿಹಳು ।
ಥ್ಯಾಕರೆಯನ್ನು ಸೋಲಿಸಿ ಅವಳು
ವೀರವನಿತೆ ಎನಿಸಿಹಳು ॥

©KTBS Not to be republished

## ಹೊಸ ಪದಗಳ ಅರ್ಥ

* ಪುತ್ರಿ – ಮಗಳು
* ಮಡದಿ – ಹೆಂಡತಿ
* ಮರಣ – ಸಾವು
* ಕುಲ – ವಂಶ
* ದೊರೆ – ಅರಸ, ರಾಜ
* ಜನನ – ಹುಟ್ಟು
* ವನಿತೆ – ಮಹಿಳೆ, ಸ್ತ್ರೀ

ದಿನಾಂಕ : ............................. ಶಿಕ್ಷಕರ ಸಹಿ

ಅ) ಈ ಪದಗಳ ಅರ್ಥವನ್ನು ಬರೆ.

1. ದೊರೆ – ____________
2. ವನಿತೆ – ____________
3. ಕುಲ – ____________
4. ಜನನ – ____________
5. ಪುತ್ರಿ – ____________

ಆ) 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿರುವ ಸೂಕ್ತ ಪದವನ್ನು ಹೊಂದಿಸಿ ಬರೆ.

| 'ಅ' ಪಟ್ಟಿ | 'ಬ' ಪಟ್ಟಿ | |
|---|---|---|
| 1. ಪದ್ಮಾವತಿ | – ವೀರವನಿತೆ | ____________ |
| 2. ಮಲ್ಲಸರ್ಜದೇಸಾಯಿ | – ಬ್ರಿಟಿಷ್ ಸೇನಾಧಿಕಾರಿ | ____________ |
| 3. ದೂಳಪ್ಪ ದೇಸಾಯಿ | – ಚೆನ್ನಮ್ಮಳ ಪತಿ | ____________ |
| 4. ಥ್ಯಾಕರೆ | – ಚೆನ್ನಮ್ಮಳ ತಾಯಿ | ____________ |
| 5. ಚೆನ್ನಮ್ಮ | – ಕಾಕತಿ | ____________ |
| | – ಚೆನ್ನಮ್ಮಳ ತಂದೆ | |

ದಿನಾಂಕ : ....................

ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ



ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.

ಮಾದರಿ :

ಜನಿಸು : ಗಾಂಧೀಜಿಯವರು ಪೋರ ಬಂದರು ಎಂಬ ಊರಿನಲ್ಲಿ ಜನಿಸಿದರು.

1. ದೊರೆ : ______________________
2. ವನಿತೆ : ______________________
3. ಪುತ್ರಿ : ______________________

ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.

1. ಕಿತ್ತೂರು ಚೆನ್ನಮ್ಮ ಎಲ್ಲಿ ಜನಿಸಿದಳು ?

______________________

2. ಚೆನ್ನಮ್ಮ ಯಾರ ಜೊತೆ ಬೇಟೆಗೆ ಹೋಗುತ್ತಿದ್ದಳು ?

______________________

3. ಕಿತ್ತೂರಿನ ದೊರೆ ಯಾರು ?

______________________

4. ಚೆನ್ನಮ್ಮಳ ತಂದೆ ತಾಯಿ ಯಾರು?

______________________

5. ಬ್ರಿಟಿಷ್ ಸೇನಾಧಿಪತಿಯ ಹೆಸರೇನು ?

______________________

6. ಚೆನ್ನಮ್ಮ ಯಾವಾಗ ಕಿತ್ತೂರಿನ ರಾಣಿಯಾದಳು?

______________________

7. ಚೆನ್ನಮ್ಮ ಯಾರ ವಿರುದ್ಧ ಹೋರಾಡಿದಳು?

______________________

ದಿನಾಂಕ : ......................

ಶಿಕ್ಷಕರ ಸಹಿ

©KTBS Not to be republished

ಇ) ಈ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯದಲ್ಲಿ ಉತ್ತರ ಬರೆ.

1. ಚೆನ್ನಮ್ಮ ಯಾವ ಯಾವ ವಿದ್ಯೆಗಳನ್ನು ಕಲಿತಿದ್ದಳು ?

2. ಚೆನ್ನಮ್ಮ ಬ್ರಿಟಿಷರ ವಿರುದ್ಧ ಏಕೆ ಹೋರಾಡಿದಳು?

3. ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಇತರ ವೀರ ಮಹಿಳೆಯರ ಹೆಸರುಗಳನ್ನು ಬರೆ.

4. ಚೆನ್ನಮ್ಮ ನಿನಗೆ ಇಷ್ಟವಾಗಲು ಕಾರಣವೇನು ?

5. ನಿನಗೆ ಈ ಪದ್ಯ ಇಷ್ಟವಾಗಲು ಕಾರಣವೇನು ?

ದಿನಾಂಕ : ......................

ಶಿಕ್ಷಕರ ಸಹಿ

©KTBS Not to be republished

**ಚಟುವಟಿಕೆ 1 :**

ಈ ಪದ್ಯದ ಸಾಲುಗಳಲ್ಲಿರುವ ಪ್ರಾಸ ಪದಗಳನ್ನು ಆರಿಸಿ, ಬರೆ:

1. ಕಿತ್ತೂರು ದೊರೆ ಮಲ್ಲಸರ್ಜನ
ಪ್ರೀತಿಯ ಮಡದಿ ಎನಿಸಿಹಳು । ____________________
ಮಲ್ಲಸರ್ಜನ ಮರಣ ನಂತರ ____________________
ಕಿತ್ತೂರು ರಾಣಿಯೇ ಆಗಿಹಳು ॥

2. ಗಾಂಧಿ ತಾತ ರಾಷ್ಟ್ರಪಿತ
ಭಾರತಕ್ಕೆ ಜೀವದಾತ । ____________________
ನಗೆಯ ಅಸ್ತ್ರ ಬೀರೆ ಆತ ____________________
ಬಿಳಿಯ ದೊರೆ ತಾನು ಸೋತ ॥

3. ತಕಿಟ! ತಕಿಟ! ಥೈ!
ತಮಟೆ! ಗಿಮಟೆ! ಥೈ!
ಕಾಲು ಕುಣಿ ____________________
ಕಣ್ಣು ಮಿಣಿ ! ____________________
ತಕಿಟ ! ತಕಿಟ ! ಥೈ !

ದಿನಾಂಕ : ....................

ಶಿಕ್ಷಕರ ಸಹಿ

©KTBS Not to be republished

## ಚಟುವಟಿಕೆ 2 :

**ಕೊಟ್ಟಿರುವ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆ.**

ಮಾದರಿ : ಮನೆಯಲ್ಲಿ = ಮನೆ + ಅಲ್ಲಿ

1. ತರಗತಿಯಲ್ಲಿ = ________________
2. ನದಿಯಲ್ಲಿ = ________________
3. ದೋಣಿಯಲ್ಲಿ = ________________
4. ದಾರಿಯಲ್ಲಿ = ________________
5. ಸಂತೆಯಲ್ಲಿ = ________________

## ಚಟುವಟಿಕೆ 3 :

ಮಾದರಿ : ನುಡಿಯೊಂದ = ನುಡಿ + ಒಂದ

1. ಮಾತೊಂದ = ________________
2. ಕಥೆಯೊಂದ = ________________
3. ಶಾಲೆಯೊಂದ = ________________
4. ಮನೆಯೊಂದ = ________________
5. ತರಗತಿಯೊಂದ = ________________

ದಿನಾಂಕ : ......................

ಶಿಕ್ಷಕರ ಸಹಿ

©KTBS Not to be republished

# ಓದಿ – ಉತ್ತರಿಸು

ಸೂಚನೆ : ಕೆಳಗೆ ಒಂದು ಘಟನೆ / ಸನ್ನಿವೇಶ ನೀಡಿದೆ. ಅದನ್ನು ಗಮನವಿಟ್ಟು ಓದು. ನೀಡಿರುವ ಪ್ರಶ್ನೆಗಳಿಗೆ ಉತ್ತರಿಸು.

ಚಂದು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ. ಆಗ ಇದ್ದಕ್ಕಿದ್ದಂತೆ ಚಾಲಕ ಬ್ರೇಕ್ ಹಾಕಿ ಬಸ್ಸನ್ನು ನಿಲ್ಲಿಸಿದ. ಬಸ್ಸಿನ ಒಳಗಿದ್ದವರೆಲ್ಲಾ ಮುಗ್ಗರಿಸಿದರು. ಚಂದುವಿನ ತಲೆ ಮುಂದಿನ ಸೀಟಿಗೆ ಬಡಿಯಿತು. ಚಟ್ಟನೆ ಚೀರಿದ. ಚಾಲಕ ರಸ್ತೆಯಲ್ಲಿ ಆಡುತ್ತಿದ್ದ ಮಕ್ಕಳನ್ನು ಗದರಿಸಿದನು. ಇನ್ನು ಮುಂದೆ ರಸ್ತೆಯಲ್ಲಿ ಆಡಬಾರದೆಂದು ಎಚ್ಚರಿಸಿದನು.

ಚಂದುವಿನ ಪಕ್ಕದಲ್ಲಿ ಕುಳಿತಿದ್ದ ಅಜ್ಜಿ " ನನ್ನ ಕನ್ನಡಕ ಕೆಳಗೆ ಬಿದ್ದು ಹೋಗಿದೆ ಎತ್ತಿಕೊಡಪ್ಪಾ" ಎಂದಳು, ಚಂದು ಅದನ್ನು ಎತ್ತಿಕೊಟ್ಟನು. ಅಜ್ಜಿಗೆ ಸಂತೋಷವಾಗಿ ಹಣ್ಣನ್ನು ಕೊಟ್ಟಳು.

©KTBS Not to be republished

ಉತ್ತರಿಸಿ.

1. ಚಾಲಕ ಏಕೆ ಬ್ರೇಕ್ ಹಾಕಿದ ?

______________________________

2. ಚಾಲಕ ಯಾರನ್ನು ಗದರಿದನು ?

______________________________

3. ಪ್ರಯಾಣಿಕರು ಯಾವಾಗ ಮುಗ್ಗರಿಸಿದರು ?

______________________________

4. ಚಂದುವಿನ ತಲೆ ಎಲ್ಲಿಗೆ ಬಡಿಯಿತು ?

______________________________

5. ಅಜ್ಜಿ ಚಂದುವಿಗೆ ಏನು ಕೊಟ್ಟಳು ?

______________________________

6. ರಸ್ತೆಯಲ್ಲಿ ಏಕೆ ಆಟ ಆಡಬಾರದು ?

______________________________

ದಿನಾಂಕ : ....................                ಶಿಕ್ಷಕರ ಸಹಿ

# ಪದ್ಯ ರಚನೆ



ಅ) ಚಿತ್ರವನ್ನು ಗಮನಿಸು. ಅದನ್ನು ಹೆಸರಿಸುತ್ತಾ ಪದ್ಯವನ್ನು ಪೂರ್ಣಗೊಳಿಸಿ ಓದು :

ಬಾ ಬಾ  ಯೆ ಬಣ್ಣದ  ಯೆ

 ನು ಕೊಡುವೆನು ಬಾ ಬಾ  ಯೆ

 ದ ಮೇಲಿನ ಚಂದದ  ಯೆ ನನ್ನೊಡನಾಡಲು ಬಾ ಬಾ ॥

ಆ) ಗಿಳಿಗೆ ಬದಲಾಗಿ ಬೇರೆ ಪಕ್ಷಿಯನ್ನು ಹೆಸರಿಸಿ 5 ಸಾಲಿನ ಪದ್ಯವನ್ನು ಬರೆ.

______________________________

______________________________

______________________________

______________________________

______________________________

______________________________

______________________________

ದಿನಾಂಕ : ....................

ಶಿಕ್ಷಕರ ಸಹಿ


©KTBS Not to be republished

10 4

# ಚಿತ್ರ ನೋಡಿ ಉತ್ತರಿಸು



ಸೂಚನೆ : ಚಿತ್ರವನ್ನು ಗಮನವಿಟ್ಟು ನೋಡು.



**ಚಟುವಟಿಕೆ 1 : ಕೆಳಗೆ ನೀಡಿರುವ ಪ್ರಶ್ನೆಗಳಿಗೆ ತಪ್ಪಿಲ್ಲದಂತೆ ಉತ್ತರ ಬರೆ.**

1. ಚಿತ್ರದಲ್ಲಿ ಎಷ್ಟು ದನಗಳಿವೆ ?

_______________________________

2. ತೋಟದಲ್ಲಿ ಯಾರು ಯಾರು ಇದ್ದಾರೆ ?

_______________________________

3. ಗಿಳಿಗಳು ಮತ್ತು ಮಂಗಗಳು ಏನು ಮಾಡುತ್ತಿವೆ ?

_______________________________

**ಚಟುವಟಿಕೆ 2 : ನಿನ್ನ ಅನುಭವವನ್ನು ಆಧರಿಸಿ ಉತ್ತರ ಬರೆ.**

1. ಮಕ್ಕಳು ತೋಟಕ್ಕೆ ಏಕೆ ಬಂದಿದ್ದಾರೆ ?

_______________________________

2. ಮಕ್ಕಳು ಹಣ್ಣನ್ನು ಹೇಗೆ ಪಡೆಯಬಹುದು ?

_______________________________

3. ನೀನು ಹಣ್ಣಿನ ತೋಟಕ್ಕೆ ಏಕೆ ಹೋಗುವೆ ?

_______________________________

4. ನೀನು ಹಣ್ಣಿನ ತೋಟಕ್ಕೆ ಯಾವಾಗ ಹೋಗುವೆ ?

_______________________________

ದಿನಾಂಕ : ......................

ಶಿಕ್ಷಕರ ಸಹಿ

© KTBS Not to be republished

# 11. ಕಾಡಿನ ರಾಜನ ಆಯ್ಕೆ





©KTBS Not to be republished

ಕಾಡಿನಲ್ಲಿ ಒಂದು ದೊಡ್ಡ ಆಲದಮರ. ಅಲ್ಲಿ ಎಲ್ಲಾ ಪ್ರಾಣಿ, ಪಕ್ಷಿ, ಕೀಟಗಳು ಸೇರಿದ್ದವು. ಎಲ್ಲರಿಗೂ ತಮ್ಮ ವರ್ಗದಲ್ಲಿ ನಾಯಕನನ್ನು ಆಯ್ಕೆ ಮಾಡುವ ಕಾತರ. ಅಂದಿನ ಸಭೆಗೆ ಆನೆ ಎಲ್ಲರನ್ನು ಸ್ವಾಗತಿಸುತ್ತಾ ಪ್ರಾಣಿ, ಪಕ್ಷಿ, ಕೀಟಗಳಿಗೆ ಅಭಿಪ್ರಾಯ ಮಂಡಿಸಲು ಅವಕಾಶ ಕಲ್ಪಿಸಿತು. ಹಾಗೂ ಸರದಿ ಅನುಸರಿಸಿ ಮಾತನಾಡಲು ತಾಕೀತು ಮಾಡಿತು.

ಕೀಟ ಸಂಕುಲದ ಪರವಾಗಿ ಚಿಟ್ಟೆ ತಮಗೆ ಮೊದಲ ಅವಕಾಶ ನೀಡಲು ಸಭೆಯನ್ನು ಕೋರಿತು. ಆಗ ಎಲ್ಲಾ ಪ್ರಾಣಿಗಳು ಒಪ್ಪಿಗೆ ಸೂಚಿಸಿದವು. "ಮಿತ್ರರೇ, ತನ್ನ ಭಾರಕ್ಕಿಂತ ಹೆಚ್ಚು ಭಾರವನ್ನು ಹೊರಬಲ್ಲ ನಮ್ಮ ಇರುವೆಯನ್ನು ಕಾಡಿನ ರಾಜನನ್ನಾಗಿ ಮಾಡಿ" ಎಂದು ಚಿಟ್ಟೆ ವಿನಮ್ರವಾಗಿ ಹೇಳಿತು. ನೆರೆದಿದ್ದ ಎಲ್ಲ ಪ್ರಾಣಿಗಳೂ ಸಂತೋಷದಿಂದ ಚಪ್ಪಾಳೆ ತಟ್ಟಿದವು.

ಆನೆ ಎದ್ದು ನಿಂತು ಈಗ ಪಕ್ಷಿವರ್ಗದ ಪ್ರತಿನಿಧಿಯೊಬ್ಬರು ತಮ್ಮ ಪ್ರತಿನಿಧಿಯನ್ನು ಸೂಚಿಸುವಂತೆ ತಿಳಿಸಿತು.

ಪಕ್ಷಿ ಸಂಕುಲದ ಪರವಾಗಿ ಗಿಳಿಯು ರೆಕ್ಕೆಯನ್ನು ರಪರಪ ಬಡಿಯುತ್ತಾ "ನಾವು ಕೂಡ ಈ ಕಾಡಿನಲ್ಲಿ ನಿಮ್ಮ ಒಡನಾಡಿಗಳು. ನಮ್ಮ ಪರವಾಗಿ ಅಂದವಾದ ಗರಿಗಳುಳ್ಳ, ತಕ-ತಕ ಕುಣಿಯುವ ನಾಟ್ಯ ಪ್ರವೀಣ ನವಿಲನ್ನು ಆರಿಸಿದ್ದೇವೆ" ಎಂದು ಹೇಳಿತು.

ಸಭೆಯಲ್ಲಿದ್ದ ಎಲ್ಲ ಪ್ರಾಣಿಗಳು ಹೋ! ಎಂದು ಸಂತೋಷದಿಂದ ಕೂಗಿದವು. ಆನೆಯು ಗಾಂಭೀರ್ಯದಿಂದ ತಲೆದೂಗುತ್ತಾ ಅಂತಿಮವಾಗಿ ಪ್ರಾಣಿವರ್ಗದವರಿಗೆ ಅಭಿಪ್ರಾಯ ತಿಳಿಸಲು ಅವಕಾಶ ನೀಡಿತು.

ದಿನಾಂಕ.......................                ಶಿಕ್ಷಕರ ಸಹಿ

# 11. ಕಾಡಿನ ರಾಜನ ಆಯ್ಕೆ



ಪ್ರಾಣಿವರ್ಗದಿಂದ ಚತುರತೆಯುಳ್ಳ ನರಿಯು ತನ್ನ ಸೊಂಟವನ್ನು ಸರಿಮಾಡಿಕೊಳ್ಳುತ್ತಾ ಎದ್ದು ನಿಂತು "ಮಾನ್ಯರೇ, ಈವರೆಗೂ ಕೀಟ, ಪಕ್ಷಿಗಳ ವಿನಂತಿಯನ್ನು ಆಲಿಸಿದಿರಿ. ಈ ಎರಡೂ ಸಂಕುಲಗಳೂ ಪ್ರಾಣಿ ವರ್ಗಕ್ಕಿಂತ ಗಾತ್ರದಲ್ಲಿ ಚಿಕ್ಕವರಾದರೂ ಬುದ್ಧಿವಂತಿಕೆಯಿಂದ ಸಮರ್ಥಿಸಿ ಕೊಂಡಿದ್ದಾರೆ. ನಾವೇನು ಕಡಿಮೆ?.... ನಾವು ಸುಂದರ ಕೇಶವುಳ್ಳ, ಗಾಂಭಿರ್ಯ ನಡೆಯ, ಶತ್ರುಗಳ ಎದೆಯಲ್ಲಿ ನಡುಕ ಹುಟ್ಟಿಸಬಲ್ಲ, ಕೇಸರಿಯನ್ನು ಆಯ್ಕೆ ಮಾಡಿದ್ದೇವೆ" ಎಂದು ತನ್ನ ಸಮರ್ಥನೆ ನೀಡಿತು.

ಎಲ್ಲವನ್ನು ಆಲಿಸಿದ ಸಭಾಪತಿಯಾದ ಗಜರಾಜನು ಎದ್ದು ನಿಂತು 'ಸಭಿಕರೆ, ಎಲ್ಲ ಸಂಕುಲದವರು ತಮ್ಮ ಪ್ರತಿನಿಧಿಗಳನ್ನು ಸೂಚಿಸಿದ್ದೀರಿ. ಆದರೆ ಇವರಲ್ಲಿ ಯಾರು ಹೆಚ್ಚು ಸಮರ್ಥರು? ಎಂಬುದನ್ನು ತೀರ್ಮಾನಿಸ ಬೇಕಿದೆ. ಕೀಟವರ್ಗದಿಂದ ಜೇಡ, ಪಕ್ಷಿವರ್ಗದಿಂದ ಹದ್ದು ಮತ್ತು ಪ್ರಾಣಿ ವರ್ಗದಿಂದ ಹುಲಿಯು ಸೇರಿ ಈ ಬಗ್ಗೆ ಚರ್ಚಿಸಲಿ. ಅವರ ತೀರ್ಮಾನವನ್ನು ನಾವೆಲ್ಲರೂ ಅನುಮೋದಿಸೋಣ" ಎಂದು ಹೇಳಿತು. ಎಲ್ಲ ಪ್ರಾಣಿಗಳು ಹರ್ಷದಿಂದ ಚಪ್ಪಾಳೆ ತಟ್ಟಿದವು.

ಜೇಡ, ಹದ್ದು ಮತ್ತು ಹುಲಿಯು ಚರ್ಚಿಸಲು ತೆರಳಿದವು. ಉಳಿದ ಪ್ರಾಣಿಗಳು ಕುತೂಹಲದಿಂದ ವಿಷಯ ತಿಳಿಯಲು ಕಾತುರರಾಗಿದ್ದವು. ಚರ್ಚಿಸಿದ ಪ್ರಾಣಿಗಳು ತಮ್ಮ ನಿಲುವನ್ನು ಗಜರಾಜನಿಗೆ ತಿಳಿಸಿದವು. ಗಜರಾಜನು ಸಭೆಯನ್ನು ಕುರಿತು 'ಇರುವೆ ಹಾಗೂ ನವಿಲು ಪ್ರಾಣಿವರ್ಗಕ್ಕಿಂತ ಗಾತ್ರದಲ್ಲಿ ಚಿಕ್ಕವರಾಗಿರುವುದರಿಂದ ಕಾಡಿನ ಸಮಸ್ತ ಜೀವಿಗಳನ್ನು ರಕ್ಷಿಸುವುದು ಕಠಿಣ. ಹಾಗಾಗಿ ಅತ್ಯಂತ ಬಲಿಷ್ಠ ಸಿಂಹವನ್ನೇ ಕಾಡಿನ ರಾಜನನ್ನಾಗಿ ಆಯ್ಕೆ ಮಾಡಿದ್ದಾರೆ. ಆದ್ದರಿಂದ ನಾವೆಲ್ಲರೂ ಸೇರಿ ಅನುಮೋದಿಸೋಣ" ಎಂದಿತು.

ಸಭೆಯಲ್ಲಿದ್ದ ಎಲ್ಲಾ ಪ್ರಾಣಿಗಳು ಎದ್ದು ನಿಂತು ಕಿಲಕಿಲ ನಗುತ್ತಾ ಕುಣಿದಾಡಿವು. ಕಾಡಿನ ರಾಜನ ಆಯ್ಕೆ ಪರಿಯನ್ನು ಕೊಂಡಾಡುತ್ತಾ ನಿರ್ಗಮಿಸಿದವು.



## ಹೊಸ ಪದಗಳ ಅರ್ಥ

ವಿನಂತಿ – ಕೋರಿಕೆ, ಬಿನ್ನಹ
ಸಂಕುಲ – ಸಮೂಹ, ಗುಂಪು
ಸಮರ್ಥ – ಚತುರ, ದಕ್ಷ, ಗಟ್ಟಿಗ
ಒಡನಾಡಿ – ಸ್ನೇಹಿತೆ, ಗೆಳೆಯ, ಸಖ
ಕಾತುರ – ಕುತೂಹಲ, ಉತ್ಸುಕತೆ
ಕೇಸರಿ – ಸಿಂಹ
ತಾಕೀತು – ಸೂಚನೆ, ಷರತ್ತು, ಒತ್ತಿ ಹೇಳು
ಕೌತುಕ – ಕುತೂಹಲ

ದಿನಾಂಕ : ....................

ಶಿಕ್ಷಕರ ಸಹಿ

©KTBS Not to be republished

## ಚಟುವಟಿಕೆ 1 :

ಅ) 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿರುವ ಅರ್ಥಗಳನ್ನು ಹೊಂದಿಸಿ ಗೆರೆ ಮೇಲೆ ಬರೆ.

| 'ಅ' ಪಟ್ಟಿ | | 'ಬ' ಪಟ್ಟಿ | |
|---|---|---|---|
| 1) ವಿನಂತಿ | – | ಸ್ನೇಹಿತ, ಗೆಳೆಯ | ________ |
| 2) ಕಾತುರ | – | ಕೋರಿಕೆ, ಬಿನ್ನಹ | ________ |
| 3) ಸಂಕುಲ | – | ಗುಂಪಿನ ಪರವಾಗಿ | ________ |
| 4) ಸಮರ್ಥ | – | ಕುತೂಹಲ, ಉತ್ಸುಕತೆ | ________ |
| 5) ಪ್ರತಿನಿಧಿ | – | ಚತುರ, ದಕ್ಷ | ________ |
| 6) ಒಡನಾಡಿ | – | ಸಮೂಹ, ಗುಂಪು | ________ |

## ಚಟುವಟಿಕೆ 2 :

ಅ) 'ಅ' ಪಟ್ಟಿಯಲ್ಲಿರುವ ಪದಗಳಿಗೆ 'ಬ' ಪಟ್ಟಿಯಲ್ಲಿನ ಸೂಕ್ತ ಪದಗಳನ್ನು ಹೊಂದಿಸಿ, ಗೆರೆ ಮೇಲೆ ಬರೆ.

| 'ಅ' ಪಟ್ಟಿ | | 'ಬ' ಪಟ್ಟಿ | |
|---|---|---|---|
| 1) ಕೀಟ | – | ನರಿ | ________ |
| 2) ಗಾಂಭೀರ್ಯ ನಡೆ | – | ನವಿಲು | ________ |
| 3) ಸಭಾಪತಿ | – | ಇರುವೆ | ________ |
| 4) ನಾಟ್ಯ ಪ್ರವೀಣೆ | – | ಗಜರಾಜ | ________ |
| 5) ಬುದ್ಧಿವಂತ ಪ್ರಾಣಿ | – | ಸಿಂಹ | ________ |

ದಿನಾಂಕ : ....................

ಶಿಕ್ಷಕರ ಸಹಿ

©KTBS Not to be republished

# ಪ್ರಶ್ನೋತ್ತರ

**ಅ) ಕೊಟ್ಟಿರುವ ಪದಗಳಿಗೆ ಮಾದರಿಯಂತೆ ಸ್ವಂತ ವಾಕ್ಯ ರಚಿಸಿ ಬರೆ.**

**ಮಾದರಿ :** ಸುಂದರ : ಮೈಸೂರು ಸುಂದರವಾದ ನಗರ

1) ಚತುರ : ______________________

2) ನಾಯಕ : ______________________

3) ಒಡನಾಡಿ : ______________________

4) ವಿನಂತಿ : ______________________

©KTBS Not to be republished

**ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆ.**

1. ಪ್ರಾಣಿ, ಪಕ್ಷಿ ಮತ್ತು ಕೀಟಗಳು ಎಲ್ಲಿ ಸಭೆ ಸೇರಿದ್ದವು ?

______________________

______________________

2. ಆನೆ ಏನನ್ನು ಅನುಸರಿಸಿ ಮಾತನಾಡಲು ತಾಕೀತು ಮಾಡಿತು ?

______________________

______________________

3. ತನ್ನ ಭಾರಕ್ಕಿಂತ ಹೆಚ್ಚು ಭಾರವನ್ನು ಹೊರುವ ಕೀಟ ಯಾವುದು?

______________________

______________________

ದಿನಾಂಕ : ....................

ಶಿಕ್ಷಕರ ಸಹಿ

4. ಗಿಳಿಯು ರೆಕ್ಕೆಯನ್ನು ಹೇಗೆ ಬಡಿಯುತ್ತ ನಿಂತಿತು ?

5. ಸುಂದರವಾದ ಗರಿಗಳುಳ್ಳ ಪಕ್ಷಿ ಯಾವುದು?

6. ಕಾಡಿನ ರಾಜನನ್ನಾಗಿ ಯಾರನ್ನು ಆಯ್ಕೆ ಮಾಡಲಾಯಿತು ?

**ಇ) ಈ ಮಾತನ್ನು ಯಾರು ಯಾರಿಗೆ ಹೇಳಿದರು ?**

1. "ನಾವು ಕೂಡ ಈ ಕಾಡಿನಲ್ಲಿ ನಿಮ್ಮ ಒಡನಾಡಿಗಳು".

2. "ಪ್ರಾಣಿವರ್ಗದಿಂದ ಹುಲಿಯು ಸೇರಿ ಚರ್ಚಿಸಲಿ".

ದಿನಾಂಕ : ......................

ಶಿಕ್ಷಕರ ಸಹಿ

©KTBS Not to be republished

3. “ನಾವೇನೂ ಕಡಿಮೆ ಇಲ್ಲ”.

4. " ಕಾಡಿನ ಸಮಸ್ತ ಜೀವಿಗಳನ್ನು ರಕ್ಷಿಸುವುದು ಕಠಿಣ ! "

**ಈ) ಈ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯದಲ್ಲಿ ಉತ್ತರ ಬರೆ.**

1. ನವಿಲಿಗೆ ಕಾಡಿನ ರಾಜನಾಗಲು ಯಾವ ಗುಣಗಳಿವೆ?

2. ನರಿಯು ತನ್ನ ನಾಯಕನ ಬಗ್ಗೆ ಹೇಗೆ ಸಮರ್ಥಿಸಿಕೊಂಡಿತು ?

3. ಇರುವೆಯನ್ನು ನಾಯಕನನ್ನಾಗಿ ಮಾಡಲು ಪ್ರಾಣಿವರ್ಗ ಏಕೆ ಒಪ್ಪಲಿಲ್ಲ ?

ದಿನಾಂಕ : ....................

ಶಿಕ್ಷಕರ ಸಹಿ

©KTBS Not to be republished

**ಅ) ಮಾದರಿಯಲ್ಲಿ ಕೊಟ್ಟಿರುವ ಪದದಂತೆ ನಿನಗೆ ತಿಳಿದಿರುವ ಪದಗಳನ್ನು ಹೂವಿನ ದಳಗಳಲ್ಲಿ ಬರೆ**

**ಮಾದರಿ :** ಝುಣಝುಣ




**ಆ) ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ವಾಕ್ಯ ಪೂರ್ಣಗೊಳಿಸಿ ಬರೆ.**

**(ಸರಸರ, ಢಣಢಣ, ತಕತಕ, ಫಳಫಳ, ಕಿಲಕಿಲ)**

**ಮಾದರಿ :** ಢಣಢಣ ಗಂಟೆ ಬಾರಿಸಿತು.

1. ಮಗು ________________ ನಕ್ಕಿತು

2. ನವಿಲು ________________ ಕುಣಿಯಿತು

3. ಮಕ್ಕಳು ಶಾಲೆಗೆ ________________ ನಡೆದರು

4. ನಕ್ಷತ್ರಗಳು ________________ ಹೊಳೆದವು.

ದಿನಾಂಕ : ......................

ಶಿಕ್ಷಕರ ಸಹಿ

©KTBS Not to be republished

ಇ) ಮಾದರಿಯಂತೆ ಉಳಿದ ಪದಗಳಿಗೆ ನಾನಾರ್ಥಗಳನ್ನು ಬರೆ.

## ಪದ ಒಂದು ಅರ್ಥ ಹಲವು

ಮಾದರಿ :




ಗುಂಪು ____________

ತರಗತಿ ____________


ಜೌಕ ____________




____________

____________

____________




____________

____________

____________




____________

____________

____________

ದಿನಾಂಕ : .....................

ಶಿಕ್ಷಕರ ಸಹಿ

©KTBS Not to be republished

ಈ) * ಚಿತ್ರ ಮತ್ತು ಪದವನ್ನು ಗಮನಿಸು.

* ಪದದಲ್ಲಿರುವ ಅಕ್ಷರಗಳನ್ನು ಬಳಸಿ ಇತರೆ ಪದಗಳನ್ನು ರಚಿಸಿ, ಬಲೂನಿನ ಮೇಲೆ ಬರೆ.




ಉದಯವಾಗಲಿ



ಮಾವನ ಮನೆ

ಉ) ಮೊದಲ ಅಕ್ಷರವನ್ನು ಬದಲಿಸಿ ಬರೆದರೆ ಅದನ್ನು ತಿನ್ನಬಹುದು.

ಉದಾ : ಮೀಸೆ – ದೋಸೆ

ಕೊಡೆ – ________

ಕೋಳಿಗೆ – ________

ದುಡ್ಡು – ________

ಸೂರಿ – ________

ಕೊಡ್ಲಿ – ________

ಬುಕ್ಕಿ – ________

ಜಟ್ಟಿ – ________

ಜೇಡ – ________

ಅಜ್ಜಿ – ________

ಸಾರೋಟ – ________

ಜೋಡುಬಳೆ – ________



ದಿನಾಂಕ : .....................

ಶಿಕ್ಷಕರ ಸಹಿ

©KTBS Not to be republished

ಮಾದರಿಯಂತೆ ಕೂಡಿಸಿ ಬರೆ.

| | | | | | |
|---|---|---|---|---|---|
| ಮಾದರಿ 1 : | ಸಭೆ | + | ಅನ್ನು | = | ಸಭೆಯನ್ನು |
| | ಸರದಿ | + | ಅನ್ನು | = | ______ |
| | ಆಯ್ಕೆ | + | ಅನ್ನು | = | ______ |
| | ನರಿ | + | ಅನ್ನು | = | ______ |
| ಮಾದರಿ 2 : | ಮನೆ | + | ಅಲ್ಲಿ | = | ಮನೆಯಲ್ಲಿ |
| | ನದಿ | + | ಅಲ್ಲಿ | = | ______ |
| | ಮಾಳಿಗೆ | + | ಅಲ್ಲಿ | = | ______ |
| | ರಸ್ತೆ | + | ಅಲ್ಲಿ | = | ______ |
| ಮಾದರಿ 3 : | ಘರ್ಜನೆ | + | ಇಂದ | = | ಘರ್ಜನೆಯಿಂದ |
| | ಚಿಟ್ಟೆ | + | ಇಂದ | = | ______ |
| | ಗಿಳಿ | + | ಇಂದ | = | ______ |
| | ಆನೆ | + | ಇಂದ | = | ______ |

ದಿನಾಂಕ : ....................

ಶಿಕ್ಷಕರ ಸಹಿ

©KTBS Not to be republished

# ಶಾಲೆಯ ಕೈತೋಟ



ಸೂಚನೆ: * ಕೆಳಗೆ ನೀಡಿರುವ ಪಠ್ಯವನ್ನು ಗಮನವಿಟ್ಟು ಓದು.

* ಮುಂದಿನ ಪುಟದಲ್ಲಿರುವ ಪ್ರಶ್ನೆಗಳಿಗೆ ತಪ್ಪಿಲ್ಲದಂತೆ ಉತ್ತರ ಬರೆ.

ಅದು ಜೂನ್ ತಿಂಗಳ ಮೊದಲ ವಾರ. ಮಕ್ಕಳೆಲ್ಲರೂ ಶಾಲಾ ಬಯಲನ್ನು ಸ್ವಚ್ಛಗೊಳಿಸಿದರು. ಗುಂಪಿನಲ್ಲಿ ಚರ್ಚೆ ಪ್ರಾರಂಭವಾಯಿತು.

ನಂದಿನಿ : ಶಾಲಾ ಹಿಂಭಾಗದ ಬಯಲಿನಲ್ಲಿ ತರಕಾರಿ ಬೆಳೆಯಲು ಸಾಧ್ಯವೇ ?

ರಾಜು : ಏಕೆ ಸಾಧ್ಯವಿಲ್ಲ ? ನಾವೆಲ್ಲರೂ ಶ್ರಮಪಟ್ಟರೆ ಸಾಧ್ಯವಿದೆ.

ಸಲೀಮ್ : ಶಾಲಾ ಹಿಂಭಾಗಕ್ಕೆ ಬೇಲಿಯೇ ಇಲ್ಲವಲ್ಲ ? ಜಾನುವಾರುಗಳು ನುಗ್ಗಿ ತೋಟ ಹಾಳು ಮಾಡುವುದಿಲ್ಲವೇ ?

ರಾಜು : ಹೌದು, ಸಲೀಮ್ ಹೇಳುವುದು ಸರಿ. ಮೊದಲು ಆ ಜಾಗಕ್ಕೆ ಬೇಲಿ ಹಾಕಿ ರಕ್ಷಣೆ ಮಾಡಬೇಕು.

ಜಾನ್ : ತರಕಾರಿಯೇ ಏಕೆ ? ಹೂವಿನ ಗಿಡಗಳನ್ನು ಬೆಳೆಸೋಣ.

ಗೀತಾ : ತರಕಾರಿಯನ್ನು ಶಾಲೆಯ ಬಿಸಿಯೂಟಕ್ಕೂ ಬಳಸಬಹುದು.

ರೀಟಾ : ಹಾಗಾದರೆ ಹೂವಿನ ಗಿಡಗಳನ್ನು ಶಾಲೆಯ ಮುಂಭಾಗದಲ್ಲಿ ಬೆಳೆಸೋಣ.

ರಾಜು : ನಿಜ ರೀಟಾ, ನೀನು ಹೇಳುವುದು ಸರಿಯಾಗಿದೆ.

ಚಂದ್ರು : ಅದೇನೋ ಸರಿ, ಹೂವಿನ ಗಿಡಗಳನ್ನು ಬೆಳೆಸುವುದರಿಂದ ಏನು ಪ್ರಯೋಜನ ?

ರಾಜು : ಹೂ ತೋಟದಿಂದ ಶಾಲಾ ಪರಿಸರ ಅಂದವಾಗಿ ಕಾಣುತ್ತದೆ.

ದಿನಾಂಕ : ...................... ಶಿಕ್ಷಕರ ಸಹಿ

©KTBS Not to be republished

ರೀಟಾ : ಬಿತ್ತನೆಗೆ ಬೀಜ ಹಾಗೂ ಸಸಿಗಳನ್ನು ಎಲ್ಲಿಂದ ತರುವುದು ?

ರಾಜು : ನಮ್ಮ ಮನೆಯಲ್ಲಿ ತರಕಾರಿ ಬೀಜಗಳಿವೆ. ಖಂಡಿತ ತರುತ್ತೇನೆ.

ಗೀತ : ನಮ್ಮ ಮನೆಯಿಂದ ಹೂವಿನ ಸಸಿ ತರುತ್ತೇನೆ.

ಅಮೀನಾ : ರಾಜು, ಅವುಗಳನ್ನು ಬೆಳೆಯುವ ಕ್ರಮ ಹೇಗೆ ?

ರಾಜು : ಅಮೀನಾ, ನಾವು ಮೊದಲು ಬೆಳೆಯುವ ಜಾಗವನ್ನು ಅಗೆದು ಹದಗೊಳಿಸಬೇಕು. ಅದರಲ್ಲಿ ಅಳತೆಗೆ ಅನುಗುಣವಾಗಿ ಬಿತ್ತನೆ ಮಾಡಬೇಕು. ಕಾಲ ಕಾಲಕ್ಕೆ ನೀರು, ಗೊಬ್ಬರ ಹಾಕಿ ಪೋಷಣೆ ಮಾಡಬೇಕು.

ಎಲ್ಲರೂ : ಹಾಗಾದರೆ ಶಾಲಾ ಕೈತೋಟದ ಕೆಲಸ ಯಾವಾಗ ಆರಂಭಿಸೋಣ ?

ರಾಜು : ನೀವೆಲ್ಲರೂ ಈ ಸಂವಾದದಲ್ಲಿ ಚರ್ಚಿಸಿದ ಅಂಶಗಳನ್ನು ಗುರುಗಳಿಗೆ ತಿಳಿಸುತ್ತೇನೆ. ಅವರ ಅನುಮತಿ ಪಡೆದು ಕೆಲಸ ಆರಂಭಿಸೋಣ. ಆ ವೇಳೆಗೆ ಶಾಲೆಯ ಘಂಟೆ ಬಾರಿಸಿತು. ಎಲ್ಲರೂ ತರಗತಿ ಕೊಠಡಿಗೆ ತೆರಳಿದರು.

©KTBS Not to be republished

## ಉತ್ತರಿಸು.

1. ಚರ್ಚೆ ಎಲ್ಲಿ ನಡೆಯುತ್ತಿದೆ ?

______________________________

______________________________

ದಿನಾಂಕ : ..................... ಶಿಕ್ಷಕರ ಸಹಿ

2. ಯಾವ ವಿಷಯವಾಗಿ ಚರ್ಚೆ ನಡೆಯುತ್ತಿದೆ ?

3. ತರಕಾರಿ ಗಿಡಗಳನ್ನು ಏಕೆ ಬೆಳೆಸಬೇಕು?

4. ಹೂವಿನ ಸಸಿಯನ್ನು ತರುತ್ತೇನೆ ಎಂದು ಹೇಳಿದವರು ಯಾರು ?

5. ತರಕಾರಿ ಬೆಳೆಯುವ ವಿಧಾನವನ್ನು ತಿಳಿಸಿದವರು ಯಾರು ?

ದಿನಾಂಕ : ......................

ಶಿಕ್ಷಕರ ಸಹಿ

©KTBS Not to be republished

# ಆಲಿಸಿ ಬರೆ



ಗಮನಕ್ಕೆ : ನಿನ್ನ ತರಗತಿಯಲ್ಲಿ ಸಂವಾದ ನಡೆಯುತ್ತಿರುವುದನ್ನು ಗಮನಿಸು. ನೀನು ಆಲಿಸಿದ ಅಂಶವನ್ನು ಈ ನಮೂನೆಯಲ್ಲಿ ದಾಖಲಿಸು.

* ಸಂವಾದ ನಡೆಯುತ್ತಿದ್ದ ಸ್ಥಳ : ______________________

* ಸಂವಾದದಲ್ಲಿ ಭಾಗವಹಿಸಿದ್ದವರ ಸಂಖ್ಯೆ : ______________________

* ಸಂವಾದದಲ್ಲಿ ಭಾಗವಹಿಸಿದ್ದವರ ಹೆಸರು : 1 ______________________

(ಇಬ್ಬರು ಭಾಗವಹಿಸಿದ್ದರೆ 2 ಹೆಸರು ಮಾತ್ರ) 2 ______________________

3 ______________________

ಒಂದನೇ ಸುತ್ತು :

1 ನೇ ವ್ಯಕ್ತಿ ಹೆಸರು : ______________________

ಹೇಳಿದ ಮಾತು : ______________________

2 ನೇ ವ್ಯಕ್ತಿ ಹೆಸರು : ______________________

ಹೇಳಿದ ಮಾತು : ______________________

3 ನೇ ವ್ಯಕ್ತಿ ಹೆಸರು : ______________________

ಹೇಳಿದ ಮಾತು : ______________________

ಸಂವಾದದಲ್ಲಿ ಚರ್ಚಿಸಿದ ವಿಷಯ : ______________________

ದಿನಾಂಕ : .......................

ಶಿಕ್ಷಕರ ಸಹಿ

©KTBS Not to be republished

# ಆಲೋಚಿಸಿ ಉತ್ತರಿಸು

* ಚಿತ್ರ ಮತ್ತು ಪ್ರಶ್ನೆಗಳನ್ನು ಗಮನಿಸು.
* ಈ ಪ್ರಶ್ನೆಗಳು ಮೂಡಲು ಕಾರಣವಾದ ಸೂಕ್ತ ಹೇಳಿಕೆಗಳನ್ನು ಗೆರೆಯ ಮೇಲೆ ಬರೆ.




ಗ್ರಾಹಕ : ______________________________

ವ್ಯಾಪಾರಿ : ಬೆಲೆಯನ್ನು ಏಕೆ ಕಡಿಮೆ ಮಾಡಿಕೊಳ್ಳಬೇಕು ?



ಶಿಕ್ಷಕ : ______________________________

ಪೋಷಕ : ಮಗುವನ್ನು ಏಕೆ ಶಾಲೆಗೆ ಕಳುಹಿಸಬೇಕು ?



ವೈದ್ಯ: ______________________________

ರೋಗಿ : ಕಾಯಿಸಿ ಆರಿಸಿದ ನೀರನ್ನೇ ಏಕೆ ಕುಡಿಯಬೇಕು ?

ದಿನಾಂಕ : .....................

ಶಿಕ್ಷಕರ ಸಹಿ

© KTBS Not to be republished